# ಕಾನನ

ಫೆಬ್ರವರಿ-2025

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ




**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಡಾ. ಮಧುಸೂದನ ಹೆಚ್. ಸಿ.

ಮೌನೇಶ್ ಕನಸುಗಾರ

ಹುಸೇನ್ ನೇಣಿಕೆ


© ಮಹೇಂದ್ರ ಎಂ. ಹೆಗ್ಡೆ

ಫೆಬ್ರವರಿ–2025

## ಲೇಖನಗಳು


* ಹಾರ್ನ್ ಬಿಲ್ ಹಕ್ಕಿ – ಅರವಿಂದ ಕೂಡ್ಲ

* ಮೊಲದ ಕಿವಿಯ ಬಾವಲಿಗಳು – ಶ್ರದ್ಧಾ ಕುಮಾರಿ ಕೆ.

* 'ಕಾನನ'ಕ್ಕೆ ಹದಿನೈದು ವಸಂತಗಳ ಸಂಭ್ರಮ – ಶ್ರೀಕಾಂತ್ ಎ. ವಿ.

* ಸಸ್ಯಗಳ ವಿದ್ಯುತ್ ಸಂವಹನ! (ವಿವಿ ಅಂಕಣ) – ಜೈಕುಮಾರ್ ಆರ್.

* ಗಗನ (ಕವನ) – ದೀಪಿಕಾ ಬಾಯಿ

* ಪ್ರಕೃತಿ ಬಿಂಬ – ಹರಿಹರನ್ ಐ. ಎಸ್.
ದೀಪ್ತಿ ಎನ್.



ಮುಖಪುಟ ಛಾಯಾಚಿತ್ರ
ನಾಗರ ಹಾವು

ಮುಖಪುಟ
ಡಾ. ಅಶ್ವಥ ಕೆ. ಎನ್.

ವಿನ್ಯಾಸ
ಧನರಾಜ್ ಎಂ.



© ಮಹೇಂದ್ರ ಎಂ. ಹೆಗ್ಡೆ




# ಹಾರ್ನ್ ಬಿಲ್ ಹಕ್ಕಿ

ವಸಂತ ಋತುವಿನ ಸಮಯ. ಬೇಸಿಗೆಯ ಬಿಸಿಲು ಆಗ ತಾನೇ ಹೆಚ್ಚಾಗತೊಡಗಿತ್ತು. ಮರಗಳೆಲ್ಲ ಹೂವುಗಳನ್ನು ಅರಳಿಸಿಕೊಂಡು ಹಣ್ಣುಗಳಿಂದ ತುಂಬಿ ಸುಂದರವಾಗಿ ಕಾಣುತ್ತಿದ್ದವು. ಎಲ್ಲಾ ಕಡೆಗೂ ಬಗೆ ಬಗೆಯ ಹೂವು ಹಣ್ಣುಗಳ ಪರಿಮಳವೇ ತುಂಬಿಕೊಂಡಿತ್ತು. ಕಾಡಿಗೆ ಕಾಡೇ ಒಂದು ರೀತಿಯ ಸಂಭ್ರಮದ ವಾತಾವರಣದಲ್ಲಿತ್ತು.

ಇದೆಲ್ಲದರ ನಡುವೆ ಹಾರ್ನ್ ಬಿಲ್ ಹಕ್ಕಿಗಳ ಸಂಸಾರವೊಂದು ಖುಷಿಯಾಗಿ ಓಡಾಡುತ್ತಿತ್ತು. ಈ ಹಕ್ಕಿ ದಂಪತಿಗಳು ಹೊಸದಾಗಿ ಜೋಡಿಯಾಗಿದ್ದವು. ಹೊಸ ಮರಿಗಳ ಆಗಮನಕ್ಕೆ ಕಾಯುತ್ತಿದ್ದವು. ಹೆಣ್ಣು ಹಕ್ಕಿ, ಇನ್ನೇನು ಕೆಲವೇ ದಿನಗಳಲ್ಲಿ ಮೊಟ್ಟೆ ಇಡಲು ತಯಾರಾಗಿತ್ತು. ಮೊದಲನೇ ಬಾರಿ ಬಸುರಿಯಾದ ಈಕೆ, ಮೊಟ್ಟೆ ಇಟ್ಟು ಮರಿ ಮಾಡಲು ಸರಿಯಾದ ಜಾಗ ಯಾವುದು ಅಂತ ಹುಡುಕಾಟ ಮಾಡುತ್ತಿತ್ತು. ಗಂಡು ಹಕ್ಕಿ ಕಾಡನ್ನೆಲ್ಲ ಸುತ್ತಿ ಹೊಸ ಹೊಸ ಮರಗಳ ಪೊಟರೆಗಳನ್ನು ತೋರಿಸುತ್ತಿತ್ತು. ಯಾವ ಪೊಟರೆಯೂ ಹೆಣ್ಣಿಗೆ ಅಷ್ಟಾಗಿ ಇಷ್ಟವಾಗಲಿಲ್ಲ. ಜಾಗಕ್ಕಾಗಿ ಗಂಡುಹಕ್ಕಿಯು ಬೇರೆ ಬೇರೆ ಮರಗಳನ್ನು ವಿಚಾರಿಸುತ್ತಿತ್ತು. ಕೊನೆಗೆ ಗುಡ್ಡದ ಮೇಲಿರುವ ಮರವೊಂದರಲ್ಲಿ ಒಂದೊಳ್ಳೆ ಪೊಟರೆ ಕಾಣಿಸಿತು. ಹೆಣ್ಣು ಹಕ್ಕಿಗೂ ಜಾಗ ಬಹಳ ಇಷ್ಟವಾಯಿತು. ಮರವೂ ಜಾಗ ಕೊಡಲು ಖುಷಿಯಾಗಿ ಒಪ್ಪಿತು.



ಹೆಣ್ಣು ಹಕ್ಕಿ ಪೊಟರೆಯ ಒಳಗೆ ಹೋಗಿ ಜಾಗವನ್ನೆಲ್ಲಾ ಮತ್ತೊಮ್ಮೆ ಪರಿಶೀಲನೆ ಮಾಡಿತು. ಅದಕ್ಕೂ ಜಾಗ ಬಹಳ ಇಷ್ಟವಾಯಿತು. ಅಲ್ಲಿಂದ ಕಾಡಿನ ಕಣಿವೆ ಬಹಳ ಸುಂದರವಾಗಿ ಕಾಣುತ್ತಿತ್ತು. ಆದಷ್ಟು ಬೇಗನೆ ಒಳಗೆ ಸೇರಿದ ಹೆಣ್ಣು ತನ್ನ ಕೆಲಸ ಆರಂಭ ಮಾಡಿತು.







ಹದ್ದು, ಗೂಬೆ, ಗಿಡುಗ ಇತರೆ ಯಾವುದೇ ದೊಡ್ಡ ಹಕ್ಕಿಗಳ ಕಣ್ಣಿಗೆ ಗೂಡು ಬೀಳಬಾರದು ಎಂಬ ಉದ್ದೇಶದಿಂದ ಕೊಕ್ಕು ಹೊಕ್ಕುವಷ್ಟು ಜಾಗ ಬಿಟ್ಟು ಪೊಟರೆಯ ಬಾಗಿಲನ್ನು ಮುಚ್ಚಲು ಪ್ರಾರಂಭ ಮಾಡಿತು. ಗಂಡು ಹಕ್ಕಿಯೂ ಅದಕ್ಕೆ ಸಹಾಯ ಮಾಡಿತು. ಎಲ್ಲ ತಯಾರಾದಾಗ ಹೆಣ್ಣಿಗೆ ಹೆರಿಗೆ ನೋವು ಪ್ರಾರಂಭವಾಯಿತು. ಮೊಟ್ಟೆಗಳನ್ನು ಇಡಲು ಮೃದುವಾದ ಹಾಸಿಗೆ ಬೇಕಲ್ಲ. ಹೊರಗಡೆಯಿಂದ ಏನನ್ನಾದರೂ ತಂದು ತಯಾರು ಮಾಡಲು ಸಮಯವಿಲ್ಲ ಎಂದು ತನ್ನ ಗರಿಗಳನ್ನೇ ಉದುರಿಸಿ ಮೊಟ್ಟೆಗಳಿಗೆ ಪುಟ್ಟದೊಂದು ಹಾಸಿಗೆಯನ್ನು ಸಿದ್ದಪಡಿಸಿತು. ಎಲ್ಲವೂ ಸಿದ್ದವಾದಾಗ ಒಂದೊಂದಾಗಿ ಮೂರು ಮೊಟ್ಟೆಗಳನ್ನು ಇಟ್ಟಿತು. ಗಂಡು ಹಕ್ಕಿ ಸ್ವಲ್ಪ ದೂರದಲ್ಲಿ ಕುಳಿತು ಕಾವಲು ಕಾಯುತ್ತಿತ್ತು. ಹೆದರಬೇಡ ನಾನಿಲ್ಲಿ ಹತ್ತಿರದಲ್ಲೇ ಇದ್ದೇನೆ, ಧೈರ್ಯವಾಗಿರು ಎಂದು ಹೇಳುತ್ತಿತ್ತು.

ಮೊಟ್ಟೆ ಇಟ್ಟ ಹೆಣ್ಣು ಹಕ್ಕಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಿತು. ಗಂಡು ಹಕ್ಕಿ ಕೂಡಲೇ ಹಾರಿ ಹೋಗಿ ರಸವತ್ತಾದ ಹಣ್ಣುಗಳನ್ನು ಹುಡುಕಿ ತನ್ನ ಗಂಟಲಿನಲ್ಲಿ ಇಟ್ಟುಕೊಂಡು ಹಾರಿ ಬಂತು. ಕಾವು ಕೊಡುತ್ತಿರುವ ತನ್ನ ಸಂಗಾತಿಗೆ ಹಣ್ಣುಗಳನ್ನು ತಿನ್ನಿಸಿ ಮುದ್ದು ಮಾಡಿತು. ಹೀಗೆಯೇ ಪ್ರತಿ ದಿನ ವಿಧ ವಿಧವಾದ ಹಣ್ಣುಗಳನ್ನು ಹುಡುಕಿ ತಂದು ತಿನ್ನಿಸಿ ತನ್ನ ಸಂಗಾತಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿತ್ತು. ಮೊಟ್ಟೆಗಳು ಹೇಗಿವೆ ಎಂದು ವಿಚಾರಿಸಿ ಪೊಟರೆಯ ಕಿಂಡಿಯಲ್ಲೇ ಇಣುಕಿ ನೋಡುತ್ತಿತ್ತು.



ಹೀಗಿರಲು ಒಂದು ದಿನ ಮೊಟ್ಟೆ ಒಡೆದು ಮೂರು ಪುಟಾಣಿ ಮರಿಗಳು ಹೊರ ಬಂದವು. ಮರಿಗಳನ್ನು ನೋಡಿ ತಂದೆ ತಾಯಿ ಇಬ್ಬರಿಗೂ ಸಂಭ್ರಮವೋ ಸಂಭ್ರಮ. ತಂದೆಗೆ ಈಗ ತನ್ನನ್ನೂ ಸೇರಿಸಿ ಐದು ಜನರ ಹೊಟ್ಟೆ ತುಂಬಿಸುವ ಜವಾಬ್ದಾರಿ. ಕಾಡಿನಲ್ಲಿ ನೇರಳೆ, ಪೇರಳೆ, ಬೈನೆ, ಅತ್ತಿ, ಆಲ ಮೊದಲಾದ ಮರಗಳು ಹಣ್ಣು ತುಂಬಿಕೊಂಡಿದ್ದವು. ಮರಿಗಳಿಗೂ ಸಂಗಾತಿಗೂ ಹಣ್ಣು ತಂದು ಕೊಡುವುದು ಕಷ್ಟದ ಕೆಲಸವೇನೂ ಆಗಿರಲಿಲ್ಲ. ಒಮ್ಮೊಮ್ಮೆ ಸಣ್ಣ ಪುಟ್ಟ ಹಾವು, ಹಲ್ಲಿ, ಕೀಟಗಳನ್ನೂ ಹಿಡಿದುಕೊಂಡು ಬರುತ್ತಿತ್ತು.



© ಮಹೇಂದ್ರ ಎಂ. ಹೆಗ್ಡೆ



© ಮಹೇಂದ್ರ ಎಂ. ಹೆಗ್ಡೆ

ತಂದೆ ಹಕ್ಕಿಯ ಪ್ರತಿ ದಿನದ ಓಡಾಟವನ್ನು ದೊಡ್ಡದೊಂದು ಹದ್ದು ಪ್ರತಿದಿನ ಆಕಾಶದಿಂದಲೇ ಗಮನಿಸುತ್ತಿತ್ತು. ಚುರುಕು ಬುದ್ಧಿಯ ಹದ್ದಿಗೆ ವಿಷಯವೇನು ಎಂದು ತಿಳಿದುಹೋಯಿತು. ಓಹೋ ಹಾರ್ನ್ ಬಿಲ್ ಹಕ್ಕಿ ಸಂಸಾರ ಹೂಡಿದೆ, ಮರಿಗಳು ಆಗಲೇ ಹೊರಗೆ ಬಂದಿವೆ. ಸರಿಯಾದ ಸಮಯ ನೋಡಿ ದಾಳಿ ಮಾಡಿದರೆ, ಧಾರಾಳ ಆಹಾರ ಸಿಗಬಹುದು ಎಂದು ಯೋಚಿಸಿ ಹೊಂಚು ಹಾಕುತ್ತಿತ್ತು. ಆಕಾಶದಲ್ಲಿ ಮೌನವಾಗಿ ಹಾರುತ್ತ ಗಂಡು ಹಕ್ಕಿಯ ಚಲನವಲನವನ್ನು ಗಮನಿಸುತ್ತಿತ್ತು. ಗಂಡು ಹಕ್ಕಿ ಆಚೆ ಹೋಗುವ ಸಮಯವನ್ನೇ ಕಾದು, ಗೂಡಿಗೆ ದಾಳಿ ಮಾಡಿತು. ಹೆಣ್ಣು ಹಕ್ಕಿ ಮರಿಗಳ ಜೊತೆ ಗೂಡಿನಲ್ಲಿ ಇದ್ದುದು ಹದ್ದಿಗೆ ತಿಳಿದಿರಲಿಲ್ಲ. ಹದ್ದು ಇನ್ನೇನು ಗೂಡಿಗೆ ದಾಳಿ ಮಾಡಬೇಕು, ಹೆಣ್ಣು ಹಕ್ಕಿಗೆ ದಾಳಿಯ ಸೂಚನೆ ಸಿಕ್ಕಿಬಿಟ್ಟಿತು. ಅದು ತನ್ನ ಉದ್ದನೆಯ ಕೊಕ್ಕಿನಿಂದ ಪ್ರತಿದಾಳಿ ಮಾಡಿತು. ಪ್ರತಿದಾಳಿಯಿಂದ ಹದ್ದು ಗಾಬರಿಗೊಂಡಿತು. ಹೆಣ್ಣು ಹಕ್ಕಿ ಜೋರಾಗಿ ಕಿರುಚುತ್ತ ಹದ್ದು ಗೂಡಿನೊಳಗೆ ನುಗ್ಗುವುದನ್ನು ತಡೆಯಿತು. ಬೇರೆ ದಾರಿ ಕಾಣದೆ ಹದ್ದು ಅಲ್ಲಿಂದ ಜಾಗ ಖಾಲಿ ಮಾಡಿತು. ಮರಿಗಳು ಇದನ್ನು ನೋಡುತ್ತಾ ಪೊಟರೆಯ ಮೂಲೆಯಲ್ಲಿ ಮುದುರಿ ಕುಳಿತಿದ್ದವು. ಹದ್ದು ಹೋದ ನಂತರ ಅಮ್ಮನ ಬಳಿ ಬಂದು ಅಮ್ಮನನ್ನು ಗಟ್ಟಿಯಾಗಿ ಹಿಡಿದುಕೊಂಡವು. ಸ್ವಲ್ಪ ಹೊತ್ತಿನಲ್ಲಿ ಹಣ್ಣುಗಳನ್ನು ತೆಗೆದುಕೊಂಡು ಬಂದ ಅಪ್ಪನಿಗೆ ನಡೆದ ವಿಚಾರವನ್ನೆಲ್ಲಾ ಮರಿ ಹಕ್ಕಿಗಳು ವಿವರಿಸಿ ಹೇಳಿದವು. ತಾಯಿ ಹಕ್ಕಿಯ ಧೈರ್ಯವನ್ನು ಎಲ್ಲರೂ ಹೊಗಳಿದರು.



© ಮಹೇಂದ್ರ ಎಂ. ಹೆಗ್ಡೆ

ಮರಿಗಳು ಮೊಟ್ಟೆಯಿಂದ ಹೊರಬಂದು ಆಗಲೇ ಒಂದೂವರೆ ತಿಂಗಳಷ್ಟು ಸಮಯವಾಗಿತ್ತು. ಮರಿಗಳಿಗೂ ರೆಕ್ಕೆ ಬಲಿತಿತ್ತು. ಅವುಗಳ ತುಂಟಾಟ ಜಾಸ್ತಿಯಾಗಿತ್ತು. ಪೊಟರೆಯ ಬಾಗಿಲಿನಿಂದಷ್ಟೇ ಕಾಣುತ್ತಿದ್ದ ಕಾಡನ್ನು ನೋಡಬೇಕು ಎಂದು ಮರಿ ಹಕ್ಕಿಗಳು ಹಾತೊರೆಯುತ್ತಿದ್ದವು. ಒಂದು ದಿನ ಮರಿ ಹಕ್ಕಿಗಳು ಪೊಟರೆಯಿಂದ ನಿಧಾನವಾಗಿ ಹೊರಗೆ ಬಂದು ಮರದ ಕೊಂಬೆಯ ಮೇಲೆ ಕುಳಿತುಕೊಂಡವು. ಹಾರಲು ತಯಾರಾದ ಹಾರ್ನ್ ಬಿಲ್ ಸಂಸಾರ ತಮಗೆ ಇಷ್ಟು ದಿನ ಆಶ್ರಯ ನೀಡಿದ ಮರಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಹೇಳಿದವು. 'ಮತ್ತೆ ಮುಂದಿನ ಬಾರಿ ಇಲ್ಲೇ ಬನ್ನಿ. ನೀವಿದ್ದಾಗ ದಿನ ಕಳೆದದ್ದೇ ತಿಳಿಯಲಿಲ್ಲ' ಎಂದು ಮರ ಪ್ರೀತಿಯಿಂದ ಕಳುಹಿಸಿ ಕೊಟ್ಟಿತು. ರೆಕ್ಕೆ ಬಿಚ್ಚಿ ಆಕಾಶದ ಕಡೆಗೆ ಹಾರಿದ ಮರಿಗಳಿಗೆ ಹೊಸತೊಂದು ಲೋಕ ತೆರೆದುಕೊಂಡಿತು.


© ಅರವಿಂದ ಕೂಡ್ಲ


© ಮಹೇಂದ್ರ ಎಂ. ಹೆಗ್ಡೆ


© ಮಹೇಂದ್ರ ಎಂ. ಹೆಗ್ಡೆ


© ಮಹೇಂದ್ರ ಎಂ. ಹೆಗ್ಡೆ

**ಲೇಖನ: ಅರವಿಂದ ಕೂಡ್ಲ**
**ದಕ್ಷಿಣ ಕನ್ನಡ ಜಿಲ್ಲೆ**




# ಮೊಲದ ಕಿವಿಯ ಬಾವಲಿಗಳು

ಬಾವಲಿಗಳ ಬಗ್ಗೆ ಆಸಕ್ತಿಯು ಬಂದಾಗಿನಿಂದ ಅವುಗಳನ್ನು ಗುರುತಿಸುವುದು, ಅವುಗಳ ಆವಾಸಸ್ಥಾನವನ್ನು ಪತ್ತೆ ಹಚ್ಚುವುದು ಮತ್ತು ಸ್ಥಳೀಯರಲ್ಲಿ ಬಾವಲಿಗಳ ಆವಾಸ ಸ್ಥಾನದ ಕುರಿತು ವಿಚಾರಿಸುವುದು ನನಗೆ ಒಂದು ಅಭ್ಯಾಸವಾಗಿದೆ. ಬಾವಲಿಗಳ ಕುರಿತಾದ ನನ್ನ ಆಸಕ್ತಿಯನ್ನು ಅರಿತ ಸ್ಥಳೀಯರು ತಾವೇ ಬಾವಲಿಗಳಿರುವ ಜಾಗವನ್ನು ನನಗೆ ತೋರಿಸುತ್ತಾರೆ. ಎಲ್ಲಾ ಪ್ರಾಣಿ-ಪಕ್ಷಿಗಳಿಗೂ ಪ್ರತಿ ಊರಿನಲ್ಲಿಯೂ ಒಂದೊಂದು ಹೆಸರು ಇರುವಂತೆಯೇ ಬಾವಲಿಗಳಿಗೂ ಇವೆ. ಈ ಹೆಸರುಗಳು ಬಾವಲಿಗಳ ಗುಣಲಕ್ಷಣಗಳನ್ನು ಸೂಚಿಸುವಂತೆ ಇರುತ್ತವೆ. ಆಯಾ ಪ್ರದೇಶ ಮತ್ತು ವಿವಿಧ ಜನಸಮೂಹಗಳಲ್ಲಿ ಬಾವಲಿಗಳ ಕುರಿತಾದ ವಿವಿಧ ಅಭಿಪ್ರಾಯಗಳನ್ನು ಕಾಣಬಹುದಾಗಿದೆ. ಕೆಲವೆಡೆ ಬಾವಲಿಗಳನ್ನು ನಕಾರಾತ್ಮಕವಾಗಿ ಕಂಡರೆ, ಇನ್ನು ಹಲವು ಕಡೆಗಳಲ್ಲಿ ಸಕಾರಾತ್ಮಕವಾಗಿ ಕಾಣುವುದೂ ಇದೆ. ಮಾನವ ಚಟುವಟಿಕೆಗಳಿಲ್ಲದ ಪಾಳು ಬಿದ್ದ ಕಟ್ಟಡಗಳನ್ನು ಬಾವಲಿಗಳು ತಮ್ಮ ಆವಾಸಸ್ಥಾನವನ್ನಾಗಿ ಮಾಡಿಕೊಳ್ಳುತ್ತವೆ. ಇಂತಹ ಒಂದು ಸ್ಥಳವನ್ನು ನನಗೆ ನಮ್ಮ ಕರ್ನಾಟಕದ ಪಶ್ಚಿಮ ಘಟ್ಟದ ಸಾಲಿನಲ್ಲಿರುವ ಯಲ್ಲಾಪುರದ ಒಂದು ಗ್ರಾಮಸ್ಥರು

ತೋರಿಸಿಕೊಟ್ಟರು. ಅಲ್ಲಿ ನಾನು ಕಂಡ ಬಾವಲಿ ಪ್ರಭೇದವನ್ನು ಮತ್ತು ಅದರ ವಿಶೇಷತೆಯನ್ನು ಈ ಲೇಖನದಲ್ಲಿ ವಿವರಿಸುತ್ತೇನೆ.

ಹೌದು, ಮೊಲದ ಕಿವಿಗಳಂತೆ ಸುಂದರವಾದ, ದೊಡ್ಡ ಕಿವಿಗಳನ್ನು ಹೊಂದಿರುವ ಬಾವಲಿಗಳೇ ಮೊಲದ ಕಿವಿಯ ಬಾವಲಿಗಳು. ಭಾರತದಲ್ಲಿರುವ 9 ಬಾವಲಿಗಳ ಕುಟುಂಬದಲ್ಲಿ (Family) ಮೊಲದ ಕಿವಿಯ ಬಾವಲಿಗಳೂ ಸೇರಿಕೊಳ್ಳುತ್ತವೆ. ಈ ಬಾವಲಿಯ ಕುಟುಂಬದ ವೈಜ್ಞಾನಿಕ ಹೆಸರು *'ಮೆಗಾಡರ್ಮಾಟಿಡೆ'* (*Megadermatidae*). ಭಾರತದಲ್ಲಿ ಈ ಕುಟುಂಬದ ಎರಡು ಪ್ರಭೇದದ (Species) ಬಾವಲಿಗಳಿವೆ. ಅವುಗಳೆಂದರೆ *ಮೆಗಾಡರ್ಮಾ ಸ್ಪಾಸ್ಮಾ* (*Megaderma spasma*) (ಚಿತ್ರ 1) ಮತ್ತು *ಲೈರೋಡರ್ಮಾ ಲೈರಾ* (*Lyroderma lyra*) (ಚಿತ್ರ 2).





ಚಿತ್ರ 1: *Megaderma spasma*





ಚಿತ್ರ 2: *Lyroderma lyra*

## ಮೊಲದ ಕಿವಿಯ ಬಾವಲಿಯು ಭಾರತಕ್ಕೆ ಮಾತ್ರ ಸೀಮಿತವೇ?

*ಮೆಗಾಡರ್ಮಾ ಸ್ಪಾಸ್ಮಾ* ಭಾರತದಲ್ಲಿ ಹೆಚ್ಚಾಗಿ ಪಶ್ಚಿಮ ಹಾಗು ಪೂರ್ವಘಟ್ಟಗಳಲ್ಲಿ ಕಂಡುಬರುತ್ತದೆ. ಅದಲ್ಲದೇ ಉತ್ತರ ಭಾರತ ಹಾಗೂ ಈಶಾನ್ಯ ಭಾರತದ ಕೆಲವು ಕಡೆಗಳಲ್ಲೂ ಕಂಡುಬರುತ್ತದೆ (ಚಿತ್ರ 3). ಕೇವಲ ಭಾರತದಲ್ಲಿ ಮಾತ್ರವಲ್ಲದೇ, ಬಾಂಗ್ಲಾದೇಶ, ಭೂತಾನ್, ಶ್ರೀಲಂಕಾ, ಫಿಲಿಫೈನ್ಸ್, ಇಂಡೋನೇಶಿಯಾ ಮುಂತಾದ ಭಾಗಗಳಲ್ಲಿಯೂ ಇದನ್ನು ಕಾಣಬಹುದು. ವಿಶೇಷವಾಗಿ ಈ ಬಾವಲಿಯ ಪ್ರಭೇದವು ಆಗ್ನೇಯ ಏಷ್ಯಾಕ್ಕೆ ಸೀಮಿತವಾಗಿದೆ. ಇನ್ನು *ಲೈರೋಡರ್ಮಾ ಲೈರಾ*ವು ಭಾರತದಾದ್ಯಂತ ಕಂಡುಬರುತ್ತದೆ. ಅದಲ್ಲದೇ ಆಗ್ನೇಯ ಏಷ್ಯಾ ಮತ್ತು ದಕ್ಷಿಣ ಏಷ್ಯಾದ ದೇಶಗಳಾದ ಅಫ್ಘಾನಿಸ್ತಾನ್, ಬಾಂಗ್ಲಾದೇಶ, ಬರ್ಮಾ, ಕಾಂಬೋಡಿಯಾ, ಚೈನಾ, ಲಾವೋಸ್, ಮಲೇಶಿಯಾ, ನೇಪಾಳ, ಪಾಕಿಸ್ತಾನ, ಶ್ರೀಲಂಕಾ, ಥೈಲ್ಯಾಂಡ್ ಮತ್ತು ವಿಯಟ್ನಾಂಗಳಲ್ಲಿ ಇದನ್ನು ನಾವು ನೋಡಬಹುದು (ಚಿತ್ರ 4).




ಚಿತ್ರ 3: *ಮೆಗಾಡರ್ಮಾ ಸ್ಪಾಸ್ಮಾ*




ಚಿತ್ರ 4: *ಲೈರೋಡರ್ಮಾ ಲೈರಾ*

## ಮೊಲದ ಕಿವಿಯ ಬಾವಲಿಗಳ ಆವಾಸಸ್ಥಾನಗಳು

*ಮೆಗಾಡರ್ಮಾ ಸ್ಪಾಸ್ಮಾ*ಗಳು ತೇವ ಭರಿತ ಕಾಡು ಗಳಲ್ಲಿ ವಾಸಿಸುತ್ತವೆ. ಗುಹೆ, ಪಾಳುಬಿದ್ದ ಮನೆ, ಟೊಳ್ಳು ಮರ ಮತ್ತು ಸುರಂಗಗಳು ಇವುಗಳ ಆವಾಸಸ್ಥಾನಗಳು. ಇವುಗಳು ಹೆಚ್ಚಾಗಿ ಸಣ್ಣ-ಸಣ್ಣ ಗುಂಪಿನಲ್ಲಿ ವಾಸಿಸುತ್ತವೆ. ಕೆಲವೊಮ್ಮೆ ಇವುಗಳು ತುಂಬಾ ಒತ್ತೊತ್ತಾಗಿ ಒಂದಕ್ಕೊಂದು ಅಂಟಿಕೊಂಡು ನೇತಾಡುತ್ತವೆ (ಚಿತ್ರ 5). *ಲೈರೋಡರ್ಮಾ ಲೈರಾ*ದ ಆವಾಸಸ್ಥಾನವು ಗುಹೆ, ದೇವಸ್ಥಾನ, ಪಾಳುಬಿದ್ದ ಕಟ್ಟಡಗಳು ಮತ್ತು ಸುರಂಗ ಇತ್ಯಾದಿ ಸ್ಥಳಗಳು. ಇವೂ ಸಹ *ಮೆಗಾಡರ್ಮಾ ಸ್ಪಾಸ್ಮಾ*ದಂತೆಯೇ ಗುಂಪುಗಳಲ್ಲೇ ವಾಸಿಸುತ್ತವೆ.





ಚಿತ್ರ 5: *ಮೆಗಾಡರ್ಮಾ ಸ್ಪಾಸ್ಮಾ*

## ಮೊಲದ ಕಿವಿಯ ಬಾವಲಿಗಳನ್ನು ಗುರುತಿಸುವುದು ಹೇಗೆ?

ನಾವು ಎಲ್ಲಾದರೂ ಈ ಮೇಲ್ಕಂಡ ಆವಾಸಸ್ಥಾನಗಳಲ್ಲಿ ಬಾವಲಿಗಳನ್ನು ಕಂಡರೆ, ಮೊಲದ ಕಿವಿಯ ಬಾವಲಿಯ ಕುಟುಂಬವನ್ನು ಗುರುತಿಸುವುದು ಹೇಗೆ? ಸಹಜವಾಗಿಯೇ ಇವುಗಳ ಕಿವಿಗಳು ಮೊಲದ ಕಿವಿಗಳಂತೆಯೇ ಕಾಣಿಸುತ್ತವೆ. ಹಾಗಾಗಿ ಇತರ ಕುಟುಂಬಗಳಿಂದ ಈ ಬಾವಲಿಗಳನ್ನು ಬೇರ್ಪಡಿಸುವ ಅಂಶವೆಂದರೆ ಅದು ಈ ಬಾಲಿಗಳ ಕಿವಿಯ ರಚನೆ. ಆದರೆ ಈಗಾಗಲೇ ನಾವು ನೋಡಿದಂತೆ *ಮೆಗಾಡರ್ಮಾಟಿಡೆ* ಕುಟುಂಬದೊಳಗೆ *ಮೆಗಾಡರ್ಮಾ ಸ್ಪಾಸ್ಮಾ* ಮತ್ತು *ಲೈರೋಡರ್ಮಾಲೈರಾ* ಎಂಬ ಎರಡು ಪ್ರಭೇದಗಳಿವೆ. ಇವೆರಡೂ ಕೂಡ ಮೊಲದ ಕಿವಿಗಳಂತೆಯೇ ಕಾಣುವ ಕಿವಿಗಳನ್ನು ಹೊಂದಿವೆ. ಇವುಗಳ ನಡುವೆ ವ್ಯತ್ಯಾಸವನ್ನು ಮಾಡುವುದು ಹೇಗೆ ಎನ್ನುವ ಪ್ರಶ್ನೆಯು ನಮಗೆ ಸಹಜವಾಗಿಯೇ ಬರುತ್ತದೆ. ಅದಕ್ಕೆ ವಿಜ್ಞಾನದಲ್ಲಿ ಎರಡು ಉಪಾಯಗಳಿವೆ, ಅವುಗಳನ್ನು ನೋಡೋಣ.

## ಮೂಗು ಮತ್ತು ಕಿವಿಯ ಆಕಾರದ ಗುರುತುಗಳು – ಮೊದಲ ಉಪಾಯ


*ಮೆಗಾಡರ್ಮಾ ಸ್ಪಾಸ್ಮಾ*ದ ಮೂಗಿನ ಮೇಲ್ಭಾಗದ ರಚನೆಯು ಸಣ್ಣದಾಗಿದೆ ಮತ್ತು ಬದಿಗಳು ಸುಮಾರಾಗಿ **'C'** ಆಕಾರವನ್ನು ಹೊಂದಿವೆ. ಆದರೆ *ಲೈರೋಡರ್ಮಾ ಲೈರಾ*ದ ಮೂಗಿನ ಮೇಲ್ಭಾಗದ ರಚನೆಯು ಉದ್ದವಾಗಿದೆ ಮತ್ತು ಬದಿಗಳು ಸುಮಾರಾಗಿ ನೇರವಾಗಿವೆ (ಚಿತ್ರ 6). ಇದಲ್ಲದೇ ಇನ್ನೂ ಒಂದು ವ್ಯತ್ಯಾಸವನ್ನು ಸಹ ಇವುಗಳ ನಡುವೆ ಗುರುತಿಸಬಹುದು. ಅದೇನೆಂದರೆ ಈ ಎರಡೂ ಪ್ರಭೇದದ ಬಾವಲಿಗಳ ಕಿವಿಗಳು ಸೇತುವೆಯಾಕಾರದ ಚರ್ಮದಿಂದ ಕೂಡಿಕೊಂಡಿರುತ್ತವೆ. ಆದರೆ *ಲೈರೋಡರ್ಮಾ ಲೈರಾ*ದ ಕಿವಿಗಳು ಮೆಗಾಡರ್ಮಾ ಸ್ಪಾಸ್ಮಾದ ಕಿವಿಗಳಿಗಿಂತ ಹೆಚ್ಚಿನ ಭಾಗದಲ್ಲಿ ಅಂಟಿಕೊಂಡಿರುತ್ತವೆ (ಚಿತ್ರ 6). ಹೀಗೆ ಮೂಗಿನ ರಚನೆ ಮತ್ತು ಕಿವಿಗಳ ನಡುವಿನ ಚರ್ಮದಿಂದ ಮೊಲದ ಕಿವಿಯ ಬಾವಲಿ ಪ್ರಭೇದಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬಹುದು. ಇನ್ನು ನಾವು ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಇರುವ ಎರಡನೇ ಉಪಾಯವನ್ನು ಗಮನಿಸೋಣ.





**ಚಿತ್ರ 6: *ಮೆಗಾಡರ್ಮಾ ಸ್ಪಾಸ್ಮಾ* ಮತ್ತು *ಲೈರೋಡರ್ಮಾ ಲೈರಾ*ಗಳ ವ್ಯತ್ಯಾಸಗಳು**

## ಎಕೊಲೊಕೇಶನ್ ನ ಮುಖಾಂತಾರ ಗುರುತು – ಎರಡನೆಯ ಉಪಾಯ

ಹೆಚ್ಚಿನ ಬಾವಲಿಗಳಂತೆ ಇವುಗಳೂ ಸಹ ಎಕೋಲೊಜಿಕಲ್ ಮುಖಾಂತರ ಸಂಚಲನೆ, ಆಹಾರ ಹುಡುಕುವುದು ಮುಂತಾದವುಗಳನ್ನು ಪೂರೈಸುತ್ತವೆ. ಎಕೊಲೊಕೇಶನ್ (Echolocation) ಎಂದರೆ ಧ್ವನಿಯನ್ನು ಹೊರಡಿಸಿ ಆ ಧ್ವನಿಯು ಎದುರಿನ ವಸ್ತುವಿಗೆ ತಗುಲಿ ಪ್ರತಿಧ್ವನಿತವಾದ ತರಂಗಗಳ ಮುಖಾಂತರ ಆಯಾ ವಸ್ತುಗಳನ್ನು ಗುರುತಿಸುವುದು. ಪ್ರತಿಯೊಂದು ಪ್ರಭೇದದ ಬಾವಲಿಯೂ ತನ್ನದೇ ಆದ ವಿಶಿಷ್ಟ ಎಕೊಲೊಕೇಶನ್ ಗಳನ್ನು ಹೊಂದಿದೆ. ಹಾಗಾಗಿ ಎಕೊಲೊಕೇಶನ್ ಮುಖಾಂತರವಾಗಿಯೂ ಸಹ ನಾವು *ಮೆಗಾಡರ್ಮಾ ಸ್ಪಾಸ್ಮಾ* ಮತ್ತು *ಲೈರೋಡರ್ಮಾ ಲೈರಾ*ಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. *ಮೆಗಾಡರ್ಮಾ ಸ್ಪಾಸ್ಮಾದ ಎಕೊಲೊಕೇಶನ್* ನ ಗರಿಷ್ಠ ಆವೃತ್ತಿಯು ಸರಿಸುಮಾರು 56 kHz (ಚಿತ್ರ 7) ಇದ್ದರೆ, *ಲೈರೋಡರ್ಮಾ ಲೈರಾ*ದ್ದು ಸರಿಸುಮಾರು 50 kHz ಇರುತ್ತದೆ (ಚಿತ್ರ 8). ಹೀಗೆ ಎಕೊಲೊಕೇಶನ್ ನ ಆವೃತ್ತಿಯ ವ್ಯತ್ಯಾಸದಿಂದಲೂ ಪ್ರಭೇದದ ವ್ಯತ್ಯಾಸವನ್ನು ನಾವು ಗುರುತಿಸಬಹುದಾಗಿದೆ.




ಚಿತ್ರ 7: *ಮೆಗಾಡರ್ಮಾ ಸ್ಪಾಸ್ಮಾದ ಎಕೊಲೊಕೇಶನ್*




ಚಿತ್ರ 8: *ಲೈರೋಡರ್ಮಾ ಲೈರಾದ ಎಕೊಲೊಕೇಶನ್*

## ಮೊಲದ ಕಿವಿಯ ಬಾವಲಿಗಳ ಆಹಾರ ಪದ್ಧತಿ

ಮೊಲದ ಕಿವಿಯ ಬಾವಲಿಗಳ ವೈಶಿಷ್ಟ್ಯವು ಬರಿ ಇವುಗಳ ಕಿವಿಗಳ ಅಂದ ಮತ್ತು ಆಕಾರಕ್ಕೆ ಸೀಮಿತವಲ್ಲ. ಇವುಗಳ ಆಹಾರ ಪದ್ಧತಿಯೂ ಸಹ ವಿಶೇಷವಾದುದೇ ಆಗಿದೆ. ಇದು ಸೂರ್ಯಾಸ್ತದ ಸುಮಾರು ಅರ್ಧ ಗಂಟೆಯ ನಂತರ ಆವಾಸಸ್ಥಾನದಿಂದ ಆಹಾರಕ್ಕಾಗಿ ಹೊರ ಹಾರುತ್ತದೆ. ವೇಗವಾಗಿ ಹಾರುವ *ಮೆಗಾಡರ್ಮಾ ಸ್ಪಾಸ್ಮಾ*ವು ಮರ ಮತ್ತು ಪೊದೆಗಳ ಸುತ್ತ ಆಹಾರವನ್ನು ಬೇಟೆಯಾಡುತ್ತದೆ. ಈ ರೀತಿ ಇದು ಬೇಟೆಯಾಡುವಾಗ ಕೆಲವೊಮ್ಮೆ ಮರದ ರೆಂಬೆಗಳಲ್ಲಿ ಅಥವಾ ಬಂಡೆಯ ಕೆಳಗೆ ಕೆಲ ನಿಮಿಷಗಳ ಕಾಲ ನೇತಾಡುತ್ತಿರುತ್ತದೆ. ಹಾಗೂ ಕೆಲವೊಮ್ಮೆ ತನ್ನ ಆವಾಸಸ್ಥಾನಕ್ಕೆ ಭೇಟಿಕೊಟ್ಟು ಹೋಗುತ್ತದೆ. ಇದರ ಆಹಾರವು ವೈವಿಧ್ಯಮಯವಾಗಿದ್ದು ಚಿಟ್ಟೆ, ಪತಂಗ, ಮಿಡತೆ, ಜೀರುಂಡೆಗಳನ್ನು ತಿನ್ನುವುದರ ಜೊತೆ ಇಲಿಗಳನ್ನು ಸಹ ಬೇಟೆಯಾಡಿ ತಿನ್ನುತ್ತದೆ. ಇದು ಹಾರುತ್ತಿರುವ ಕೀಟಗಳಿಗಿಂತ ಹೆಚ್ಚಾಗಿ ವಿಶ್ರಮಿಸುತ್ತಿರುವ ಕೀಟಗಳನ್ನು ಅಂದರೆ ಗಿಡಗಳಲ್ಲಿ ಇರುವ ಕೀಟಗಳನ್ನು ತಿನ್ನುತ್ತದೆ. ಹೆಚ್ಚಾಗಿ ಇದು ಆವಾಸಸ್ಥಾನದ ಸುತ್ತಮುತ್ತಲೇ ಬೇಟೆಯಾಡುತ್ತದೆ.

ಇನ್ನು *ಲೈರೋಡರ್ಮಾ ಲೈರಾದ* ಆಹಾರ ಪದ್ಧತಿಯು ಇನ್ನೂ ಕುತೂಹಲಕಾರಿಯಾಗಿದೆ. ಇದು ಸೂರ್ಯಾಸ್ತದ ಸುಮಾರು ಒಂದು ಗಂಟೆಯ ನಂತರ ಆವಾಸಸ್ಥಾನದಿಂದ ಆಹಾರಕ್ಕಾಗಿ ಹೊರ ಹಾರುತ್ತದೆ. ಇದು ನೆಲದಿಂದ ಕಡಿಮೆ ಎತ್ತರದಲ್ಲಿ ಹಾರುತ್ತಾ ಆಹಾರ ಹುಡುಕುತ್ತವೆ. ಇದಕ್ಕೆ ಎಕೊಲೊಕೇಶನ್ ಜೊತೆಗೆ ತಮಗೆ ಆಹಾರವಾಗುವ ಪ್ರಾಣಿಗಳು ಹೊರಡಿಸುವ ಶಬ್ದಗಳನ್ನು ಗುರುತಿಸಿ, ಅವುಗಳನ್ನು ಬೇಟೆಯಾಡುವ ಸಾಮಾರ್ಥ್ಯವಿದೆ. ಇದು ವಿವಿಧ ಬಗೆಯ ಕೀಟಗಳನ್ನು ತಿನ್ನುವುದರೊಂದಿಗೆ, ಗುಬ್ಬಚ್ಚಿಯಂತಹ ಚಿಕ್ಕ ಗಾತ್ರದ ಪಕ್ಷಿಗಳು, ಹಲ್ಲಿಗಳು, ಕಪ್ಪೆಗಳನ್ನೂ ತಿನ್ನುತ್ತದೆ. ಅದರೊಂದಿಗೆ ಇದು ಇನ್ನೂ ಅಚ್ಚರಿಯೆಂಬಂತೆ ಮೀನುಗಳನ್ನೂ ತಿನ್ನುತ್ತದೆ. ಅಲ್ಲದೇ ಚಿಕ್ಕ ಗಾತ್ರದ ಬೇರೆ ಪ್ರಭೇದಗಳ ಬಾವಲಿಗಳನ್ನೂ ಸೇವಿಸುತ್ತದೆ.

## ಇವುಗಳಿಂದ ನಮಗೇನು ಪ್ರಯೋಜನ?

ಈ ಬಾವಲಿಗಳು ವಿಶಿಷ್ಟವಾಗಿರುವುದು ಮಾತ್ರವಲ್ಲದೇ ಇವುಗಳಿಂದ ನಮಗೆ ಪ್ರಯೋಜನಗಳೂ ಸಹ ಇವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬೆಳೆಗೆ ಹಾನಿಯನ್ನುಂಟು ಮಾಡುವ ಕೀಟಗಳನ್ನು ಭಕ್ಷಿಸಿ ಬೆಳೆಗಳನ್ನು ಕೀಟಗಳಿಂದ ರಕ್ಷಿಸುವುದು. ಅಲ್ಲದೇ ಆಹಾರ ಸರಪಳಿಯಲ್ಲಿ ಮುಖ್ಯ ಪಾತ್ರವಹಿಸಿ ಪರಿಸರದ ಸಮತೋಲನವನ್ನು ಕಾಪಾಡುವ ಕೆಲಸವನ್ನೂ ಮಾಡುತ್ತವೆ. ಹಾಗೂ ಇವುಗಳ ಹಿಕ್ಕೆಯು ಮಣ್ಣಿನ ಫಲವತ್ತತೆಯನ್ನೂ ಸಹ ಹೆಚ್ಚಿಸುತ್ತದೆ. ಬಾವಲಿಗಳ ಬಗ್ಗೆ ಆಸಕ್ತಿಯನ್ನು ತೋರಿದಷ್ಟೂ ಸಹ ಅನೇಕ ಕುತೂಹಲಕಾರಿ ಅಂಶಗಳು ತೆರೆದುಕೊಳ್ಳುತ್ತವೆ. ಮುದ್ದಾದ ಮೊಲದ ಕಿವಿಯ ಬಾವಲಿಗಳನ್ನು ನೋಡಿ ಅದರ ಜೀವನ ಶೈಲಿಯ ಬಗ್ಗೆ ಮತ್ತಷ್ಟು ಪ್ರಶ್ನೆಗಳು ಮನಸ್ಸಿನಲ್ಲಿ ಮೂಡಿದವು. ಅವುಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಂಶೋಧನೆಗಳನ್ನು ಹೇಗೆ ನಡೆಸುವುದು ಎಂದುಕೊಳ್ಳುತ್ತಾ ಅಲ್ಲಿಂದ ಹಿಂದುರಿಗಿದೆ.

**ಲೇಖನ:** ಶ್ರದ್ಧಾ ಕುಮಾರಿ ಕೆ.
ದಕ್ಷಿಣ ಕನ್ನಡ ಜಿಲ್ಲೆ




# 'ಕಾನನ'ಕ್ಕೆ ಹದಿನೈದು ವಸಂತಗಳ ಸಂಭ್ರಮ

ಪುಷ್ಯ ಮಾಸದ ಸಣ್ಣ ಚಳಿಗೆ ಬೆಂಗಳೂರು ತಣ್ಣಗೆ ಕುಳಿತಿದ್ದ ಆ ಭಾನುವಾರದ ಸಂಜೆ ಅಲ್ಲೊಂದು ಜಾಗ ಸಾಹಿತ್ಯದ ಕಂಪು ಪಸರಿಸಿ ಬೆಚ್ಚನಾಗಿತ್ತು. ಪಂಪ ಮಹಾಕವಿ ರಸ್ತೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜೇಂದ್ರ ಸಭಾಂಗಣ, ಹೊಸ ಬರಹಗಾರರ ಅಮೋಘ ಸಮಾಗಮಕ್ಕೆ ಸಾಕ್ಷಿಯಾಗಲು ಸಿದ್ದವಾಗಿತ್ತು. ಕನ್ನಡ ಸಾಹಿತ್ಯ ಲೋಕದ ಮೇರು ದಿಗ್ಗಜರಾದ ರಾಷ್ಟ್ರಕವಿ ಕುವೆಂಪು ಹಾಗೂ ಪೂರ್ಣಚಂದ್ರ ತೇಜಸ್ವಿ ರವರ ಭಾವಚಿತ್ರಗಳು ವೇದಿಕೆಗೆ ಮೆರುಗು ನೀಡಿದ್ದವು. ಕರ್ನಾಟಕದ ಮೂಲೆಮೂಲೆಯಿಂದ ಆಗಮಿಸಿದ್ದ ಪರಿಸರಾಸಕ್ತ ಬರಹಗಾರರ ಮೇಳವೇ ಮೇಳೈಸಿದಂತಿತ್ತು. ಅದು ಕಾನನ ಇ-ಮಾಸಪತ್ರಿಕೆಯು ಹದಿನೈದು ಸಂಭ್ರಮದ ವಸಂತಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಯೋಜಿಸಿದ್ದ ಕಾರ್ಯಕ್ರಮ. ಆದರೆ ಇಡೀ ಕಾರ್ಯಕ್ರಮದಲ್ಲಿ ಕಾನನದ ಬರಹಗಾರರನ್ನು ಮುನ್ನೆಲೆಯಲ್ಲಿ ನಿಲ್ಲಿಸಿದ್ದು ಅದರ ಹೆಗ್ಗಳಿಕೆಯೇ ಸರಿ.

ಕಾನನ ಇ-ಮಾಸಪತ್ರಿಕೆಯು ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್ (WCG) ತಂಡದ ಕನಸಿನ ಕೂಸು. ಬನ್ನೇರುಘಟ್ಟದ ಪಕ್ಕದಲ್ಲಿ ನೆಲೆಗೊಂಡಿರುವ ಈ ಸಂಸ್ಥೆ ಅಲ್ಲಿಯ ಪರಿಸರದ ಬಗ್ಗೆ ಪರಿಣಿತಿ ಹೊಂದಿರುವ ಯುವ ಸದಸ್ಯರ ಪಡೆ. ಅವರೆಲ್ಲರೂ ಪ್ರಕೃತಿಯ ಮಡಿಲಿನಲ್ಲೇ ಹುಟ್ಟಿ ಬೆಳೆದವರು. ಕಾನನ ಮಾಸ ಪತ್ರಿಕೆಯನ್ನು ಓದುಗರಿಗೆ ಕೊಡುಗೆ

ನೀಡಿರುವುದರ ಜೊತೆಗೆ ಆ ಸಂಸ್ಥೆ ಮಾಡಿರುವ ನಿಸರ್ಗಪರ ಕಾರ್ಯಗಳನ್ನು ನೆನೆದರೆ ಓದುಗರಿಗೆ WCG ತಂಡದ ಕುರಿತು ಹೆಚ್ಚಿನ ಪರಿಚಯವಾಗುತ್ತದೆ. ಈ ಸಂಸ್ಥೆಯು ಬನ್ನೇರುಘಟ್ಟದಿಂದ ಆನೇಕಲ್ ವರೆಗಿನ ರಸ್ತೆ ಬದಿಯ ಸಾಲುಮರಗಳನ್ನು ವೈಜ್ಞಾನಿಕವಾಗಿ ದಾಖಲಿಸಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಅರಣ್ಯ ಇಲಾಖೆಯ ಸಹಯೋಗದೊಂದಿಗೆ, ಈ ಅರಣ್ಯ ವ್ಯಾಪ್ತಿಯಲ್ಲಿ ಕಂಡು ಬರುವ ಸುಮಾರು 200 ಪ್ರಭೇದದ ಪಕ್ಷಿಗಳನ್ನು ದಾಖಲಿಸಿದೆ. ಆ ಪ್ರದೇಶದಲ್ಲಿ ಕಂಡು ಬರುವ ಕೀಟ ಸಂಕುಲ, ಚಿಟ್ಟೆಗಳು, ಜೇಡಗಳು, ಉರಗಗಳು, ಕಪ್ಪೆಗಳನ್ನು ದಾಖಲಿಸಿದೆ. ಅರಣ್ಯ ಇಲಾಖೆಯವರು ನಡೆಸುವ ಆನೆ ಗಣತಿಯಲ್ಲಿ ಸಹಕರಿಸಿದೆ. ರಾಮಕೃಷ್ಣ ಮಿಷನ್ ಶಿವನಹಳ್ಳಿ ಯವರು ನೆಟ್ಟು ಬೆಳೆಸುತ್ತಿರುವ ಗಿಡ ಮರಗಳಿಗೆ ಬೇಸಿಗೆ ಸಮಯದಲ್ಲಿ ನೀರೆರೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲಿನ ಕಾಳೇಶ್ವರಿ ಗ್ರಾಮದ ಕೆರೆಯ ಸುಮಾರು ಒಂದು ಎಕರೆ ಜಾಗವನ್ನು ಭೂಗಳ್ಳರಿಂದ ರಕ್ಷಿಸಿ, ಕೆರೆಯ ಆವರಣದಲ್ಲಿ ಸುಮಾರು 500ಕ್ಕಿಂತಲೂ ಹೆಚ್ಚಿನ ಸಸಿಗಳನ್ನು ನೆಟ್ಟು ಪೋಷಿಸುವ ಕಾರ್ಯದಲ್ಲಿ ನಿರತವಾಗಿದೆ.

ಪರಿಸರದ ಬಗ್ಗೆ ಮಕ್ಕಳಲ್ಲಿ ಕಾಳಜಿ ಮೂಡಿಸಲು ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ನವರ ಸಹಯೋಗದೊಂದಿಗೆ ಬನ್ನೇರುಘಟ್ಟ ಸುತ್ತ ಮುತ್ತಲಿನ ಸರ್ಕಾರಿ ಶಾಲಾ ಮಕ್ಕಳಿಗೆ 'ವನ್ಯ ವಿಜ್ಞಾನ ವಿಹಾರ' ಎಂಬ ಕಾರ್ಯಕ್ರಮವನ್ನು ನಡೆಸುತ್ತಿದೆ. ಮಕ್ಕಳಿಗೆ, ಯುವ ಜನರಿಗೆ ಪರಿಸರದ ಬಗ್ಗೆ ಅರಿವು ಮೂಡಿಸಲು ಅವರದ್ದೇ ಕ್ಯಾಂಪ್ ಸೈಟ್ ಆದ 'ಅಡವಿ ಫೀಲ್ಡ್ ಸ್ಟೇಷನ್' ನಲ್ಲಿ ಬೇಸಿಗೆ ಶಿಬಿರವನ್ನು, ಹಲವಾರು ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಸುತ್ತಲೂ ಅರಣ್ಯವಿರುವ ಕಾರಣ ಅದೇ ಅವರಿಗೆ ಪ್ರಯೋಗ ಶಾಲೆಯಾಗಿದೆ. ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು, ಅದರ ಬಗ್ಗೆ ಒಲವು ಮೂಡಿಸಲು ತಂಡದ ಸದಸ್ಯರೇ ಸೆರೆಹಿಡಿದಿರುವ ಹಲವಾರು ಉತ್ತಮ ಛಾಯಾಚಿತ್ರಗಳನ್ನು ಮುದ್ರಿಸಿ ಪ್ರದರ್ಶಿಸುತ್ತಿದೆ. ಈ ಎಲ್ಲ ಕಾರ್ಯಕ್ರಮಗಳನ್ನು ಮುಖ್ಯವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದೆ. ನವೆಂಬರ್ 2011 ರಿಂದ ಕನ್ನಡ ಭಾಷೆಯಲ್ಲಿ 'ಕಾನನ' ಎಂಬ ಇ-ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ವನ್ಯವಿಜ್ಞಾನ ಕುರಿತಾದ ಕನ್ನಡದ ಏಕೈಕ ಇ-ಮಾಸಪತ್ರಿಕೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.



ಕಾನನ ಮಾಸಪತ್ರಿಕೆಯು ತನ್ನ ಧ್ಯೇಯ 'ನಿಸರ್ಗದೆಡೆಗೆ ಪಯಣ' ಕ್ಕೆ ತಕ್ಕಂತೆ ಪರಿಸರ, ಜೀವಸಿರಿ, ಕಾಡು, ಸಂರಕ್ಷಣೆ ಕುರಿತಾದ ಪತ್ರಿಕೆಯಾದ್ದರಿಂದ ಬರಹಗಾರರ ಜೊತೆ ಅನೇಕ ಪರಿಸರಾಸಕ್ತರು, ಪರಿಸರ ಹೋರಾಟಗಾರರು, ಸ್ವಯಂ ಸೇವಕರು ಕೂಡ ಉಪಸ್ಥಿತರಿದ್ದದ್ದು ಬರಹಗಾರರ ಉತ್ಸಾಹ ಇಮ್ಮಡಿಗೊಳ್ಳಲು ಕಾರಣವಾಗಿತ್ತು. ಆರಂಭದಲ್ಲಿ ಅರ್ಧ ಮಾತ್ರವೇ ತುಂಬಿದ್ದ ಸಭಾಂಗಣ ಕೆಲವು ನಿಮಿಷಗಳ ನಂತರ ಹಿಂತಿರುಗಿ ನೋಡಿದರೆ ಕುರ್ಚಿಗಳೆಲ್ಲಾ ಭರ್ತಿಯಾಗಿದ್ದವು. ಶಿಲ್ಪಶ್ರೀ ಕಲ್ಲಿಗನೂರು ರವರ ಸುಶ್ರಾವ್ಯ ಕಂಠಸಿರಿಯಲ್ಲಿ ಮೂಡಿಬಂದ ಸೋಲಿಗರ ಕುರಿತಾದ ಜನಪದ ಸಾಲುಗಳು ಇಡೀ ಸಭಾಂಗಣದಲ್ಲಿ ವಿಶಿಷ್ಟ ಅನುಭೂತಿಯನ್ನು ಉಂಟುಮಾಡಿತ್ತು. ದೇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಗಬೇಕೆಂಬ ಅಲಿಖಿತ ಕಟ್ಟಳೆಯನ್ನು ಮುರಿದು ಜನಪದ ಗೀತೆಯೊಂದಿಗೆ ವೇದಿಕೆಗೆ ಚಾಲನೆ ನೀಡಿದ್ದು ವಿಶೇಷವೆನಿಸಿತು.




ಜ್ಞಾನದ ಧ್ಯೋತಕವಾದ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸುವಾಗ ದೀಪ ಬೆಳಗುವವರು ಸಹಜವಾಗಿಯೇ ಪಾದರಕ್ಷೆಯನ್ನು ಕಳಚುತ್ತಾರೆ. ಆದರೆ ಗಿಡಕ್ಕೆ ನೀರೆರೆದು ಉದ್ಘಾಟಿಸುವಾಗ ಸಾಮಾನ್ಯವಾಗಿ ಈ ಸಂಪ್ರದಾಯ ಕಾಣುವುದಿಲ್ಲ. ಆದರೆ ಈ ಕಾರ್ಯಕ್ರಮದ ಪ್ರತಿಯೋರ್ವ ಅತಿಥಿಗಳು ತಮ್ಮ ಪಾದರಕ್ಷೆ ತೆಗೆದು ಗಿಡಕ್ಕೆ ನೀರೆರೆದಾಗ ಎಲ್ಲಾ ಜ್ಞಾನದ ಮೂಲ ಪರಿಸರವೇ ಎಂಬುದನ್ನು ಸಾರಿ ಹೇಳಿದಂತಿತ್ತು.

ಶಿವನಹಳ್ಳಿಯ ರಾಮಕೃಷ್ಣ ಮಿಷನ್ನಿನ ಸ್ವಾಮಿ ವಿಷ್ಣುಮಯಾನಂದಜೀ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದು ವೇದಿಕೆಯಲ್ಲಿ ಆಧ್ಯಾತ್ಮದ ಪ್ರಭೆಯನ್ನು ಹೊಮ್ಮಿಸಿತು. ಸಾಮಾನ್ಯವಾಗಿ ಇಂತಹ ಕಾರ್ಯಕ್ರಮಗಳಿಗೆ ಆಗಮಿಸದ ಪೂಜ್ಯರ ಉಪಸ್ಥಿತಿ ಆಯೋಜಕರ ಕಂಗಳಲ್ಲಿ ಸಾರ್ಥಕತೆಯ ಹೊಳಪನ್ನು ಸೃಷ್ಟಿಸಿತ್ತು. ವಿಷ್ಣುಮಯಾನಂದಜೀ ಮಾತುಗಳಲ್ಲಿ ಅವರಿಗಿರುವ ಪರಿಸರದ ನೈಜಕಾಳಜಿಯ ದಿವ್ಯದರ್ಶನವಾಗುತ್ತಿತ್ತು. ತಮ್ಮ ಮಾತಿನುದ್ದಕ್ಕೂ ಪರಿಸರ ಸಂರಕ್ಷಣೆ ಕುರಿತಾಗಿಯೇ ಮಾತನಾಡುತ್ತಿದ್ದ ಅವರು ಆಯೋಜಕರ ಹಿನ್ನೆಲೆಯನ್ನು ಬಲ್ಲವರಾದ್ದರಿಂದ ಪದೇ ಪದೇ ಅವರ ಬೆನ್ನು ತಟ್ಟುವುದನ್ನು ಮರೆಯಲಿಲ್ಲ.




ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಕಂಡದ್ದು 'ಜಂಗಾಲ' ಪುಸ್ತಕ ಬಿಡುಗಡೆ. ಕಾನನ ಪತ್ರಿಕೆಯ ಪ್ರಧಾನ ಸಂಪಾದಕರು ಹಾಗೂ WCG ಯ ಸಂಸ್ಥಾಪಕ ಸದಸ್ಯರೂ ಆಗಿರುವ ಡಾ. ಅಶ್ವಥ ಕೆ. ಎನ್. ರವರ ರಚನೆಯ ಪುಸ್ತಕ. ಬಾಲ್ಯದಿಂದಲೂ ಕಾಡಿನ ಒಡನಾಟದಲ್ಲಿ ಬೆಳೆದ ಅಶ್ವಥ ಅವರು ತಮ್ಮ ಅನುಭವದ ಬುತ್ತಿಯನ್ನು ಈ ಪುಸ್ತಕದಲ್ಲಿ ಓದುಗರಿಗಾಗಿ ಬಿಚ್ಚಿಟ್ಟಿದ್ದಾರೆ. ವಿಶೇಷವಾಗಿ ಹಕ್ಕಿಗಳ ಬದುಕಿನ ಕತೆಗಳನ್ನು ಸರಳ ಪದಗಳಲ್ಲಿ ಪೋಣಿಸಿ ಹೇಳಿರುವುದು ಸಾಮಾನ್ಯ ಓದುಗನಿಗೂ ಅಪ್ಯಾಯವೆನಿಸುತ್ತದೆ. 'ಜಂಗಾಲ' ಎಂಬ ವಿಶಿಷ್ಟ ಶೀರ್ಷಿಕೆಯನ್ನು ತಮ್ಮ ಪುಸ್ತಕಕ್ಕೆ ನೀಡಿ ಓದುಗರ ಕುತೂಹಲ ಹೆಚ್ಚಿಸಿದ್ದಾರೆ. ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಸ್ವಾಮಿ ವಿಷ್ಣುಮಯಾನಂದರು ನಕಾರಾತ್ಮಕವಾದ ರೋಮಾಂಚನಕಾರಿ ಪುಸ್ತಕಗಳಿಗೂ, ಸಹಜತೆಯನ್ನೇ ಮೈಹೊದ್ದ 'ಜಂಗಾಲ'ದಂತಹ ಪುಸ್ತಕಗಳಿಗೂ ಇರುವ ವ್ಯತ್ಯಾಸವನ್ನು ಸ್ಮರಿಸಿ, ಲೇಖಕರನ್ನು ಅಭಿನಂದಿಸಿದರು. ಇನ್ನು ಪುಸ್ತಕಕ್ಕೆ ಬೆನ್ನುಡಿ ಬರೆದ ಕ್ಷಮಾ ವಿ. ಭಾನುಪ್ರಕಾಶ್ ಮಾತನಾಡಿ ಪುಸ್ತಕದ ಕುರಿತು ಪಕ್ಷಿನೋಟ ನೀಡುವುದರ ಜೊತೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪುಸ್ತಕದ 'ಹಸಿರು ಪುಕ್ಕ' ಕತೆಯನ್ನು ಓದಿದ್ದು ಕೇಳುಗರಿಗೆ ಆಹ್ಲಾದತೆಯನ್ನು ನೀಡಿತು. ಕೃತಿಯ ಕರ್ತೃ ಡಾ. ಅಶ್ವಥ ರವರು ಮಾತನಾಡಿ ಬಾಲ್ಯದಿಂದಲೂ ಅವರ ಮೇಲೆ ಪರಿಣಾಮ ಬೀರಿದ ರಾಮಕೃಷ್ಣ ಮಿಷನ್ ಬಗ್ಗೆ ನೆನೆದು ಸ್ವಾಮಿ ವಿಷ್ಣುಮಯಾನಂದರ ಪರಿಸರ ಕಾಳಜಿಯನ್ನು ಶ್ಲಾಘಿಸಿದರು. ಪುಸ್ತಕವನ್ನು ಹೊರತರುವಲ್ಲಿ ಅವರಿಗೆ ಸಹಕರಿಸಿದ ಪ್ರತಿಯೋರ್ವರನ್ನು ಸ್ಮರಿಸುವುದನ್ನು ಅವರು ಮರೆಯಲಿಲ್ಲ.




ಸಭಿಕರನ್ನು ಸೂಜಿಗಲ್ಲಿನಂತೆ ಸೆಳೆದ ಮತ್ತೋರ್ವ ಅತಿಥಿಯೆಂದರೆ ಡಾ. ಸಂಜಯ್ ಗುಬ್ಬಿ. ಬಹುಶಃ ಈ ಹೆಸರಿಗೆ ಹೆಚ್ಚಿನ ಪರಿಚಯದ ಅವಶ್ಯಕತೆಯೇ ಇಲ್ಲ. ವನ್ಯಜೀವಿಗಳ ಕುರಿತು ಕಿಂಚಿತ್ತು ಕಾಳಜಿ ಹೊಂದಿರುವವರಿಗೂ ಸಹ ಈ ಹೆಸರು ಚಿರಪರಿಚಿತ. ವನ್ಯಜೀವಿ ಸಂರಕ್ಷಣೆಯಲ್ಲಿ ಯಾವುದೇ ವೈಯಕ್ತಿಕ ಪ್ರತಿಫಲಾಪೇಕ್ಷೆ ಇಲ್ಲದೆ ತೊಡಗಿಸಿಕೊಂಡು ಹಲವು ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಜಗಜ್ಜಾಹೀರಾದ ಹೆಸರು ಅದು. ಪೂಚಂತೇ ರವರ ಕರ್ವಾಲೊ ಪುಸ್ತಕ ಓದಿದ ಪ್ರೇರಣೆಯಲ್ಲಿ 'ಮದುವೆ' ಎಂಬ ದುರಂತ ನನ್ನ ಜೀವನದಲ್ಲಿ ನಡೆದು ಹೋಯಿತು ಎಂದು ಹೇಳಿ ನೆರೆದವರನ್ನು ಸಣ್ಣ ನಗೆಗಡಲಿನಲ್ಲಿ ತೇಲಿಸಿ, ಸಭಿಕರೊಂದಿಗೆ ಸಂವಾದದಲ್ಲಿ ತೊಡಗಿದ ಅವರು ಹಲವು ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡರು. ಪರಿಸರ ಸಂರಕ್ಷಣೆ ಕೇವಲ ಸರ್ಕಾರದ, ಅರಣ್ಯ ಇಲಾಖೆಯ, ಸಂಘ ಸಂಸ್ಥೆಗಳ ಜವಾಬ್ದಾರಿಯಷ್ಟೆ ಆಗಿರದೆ ನಿಸರ್ಗದ ಭಾಗವಾದ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯವೆಂಬುದನ್ನು ಮನಗಾಣಿಸಲು ಪ್ರಯತ್ನಿಸಿದರು.




ಬಸವನಗುಡಿ ರಾಮಕೃಷ್ಣ ಮಠದ ಸ್ವಾಮಿ ಸೌಖ್ಯಾನಂದಜಿ ಮಾತನಾಡಿ ಪುಟ್ಟ ಪುಟ್ಟ ಮಕ್ಕಳಲ್ಲಿ ಪ್ರಕೃತಿಯ ಕುರಿತು, ಜೀವಚರಗಳ ಕುರಿತು ಪ್ರೀತಿ ಮೂಡಿಸುವ ಕೆಲಸವನ್ನು ಮಾಡಿದರೆ ಮುಂಬರುವ ದಿನಗಳಲ್ಲಿ ಅವುಗಳ ಸಂರಕ್ಷಣೆಗೆ ಯಾವುದೇ ಹೋರಾಟಗಳ ಅವಶ್ಯಕತೆ ಇರುವುದಿಲ್ಲ ಎಂದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಗಣೇಶ್ ವಿ. ತಡಗಣಿ ಯವರು ಸಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ಇಲಾಖೆಯು ಮಾಡಿದ ಹಲವಾರು ಕಾರ್ಯಕ್ರಮಗಳಲ್ಲಿ WCG ತಂಡದ ಸದಸ್ಯರು ಕೈಜೋಡಿಸಿದ ಸಂದರ್ಭಗಳನ್ನು ಮೆಲುಕು ಹಾಕಿದರು. ಶಾಲಾ ಮಕ್ಕಳಲ್ಲಿ ನಿಸರ್ಗ ಪ್ರೇಮ ಬೆಳೆಸಲು ಅಶ್ವಥ ಹಾಗೂ ಶಂಕರಪ್ಪರವರ ಗೆಳೆಯರ ಬಳಗ ಮಾಡುತ್ತಿರುವ ಜಾಗೃತಿ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದ ನೋಡಿ ಮೆಚ್ಚಿರುವುದಾಗಿ ತಿಳಿಸಿದರು.




'ಕಾನನ' ಪತ್ರಿಕೆಯ ಹದಿನೈದನೇ ವಾರ್ಷಿಕೋತ್ಸವ ಹಾಗೂ 'ಜಂಗಾಲ' ಪುಸ್ತಕ ಬಿಡುಗಡೆಯ ಎರಡು ಸಂಭ್ರಮಗಳ ನಡುವೆ ಇಡೀ ಸಭಾಂಗಣ ಕಳೆಗಟ್ಟಿತ್ತು. ಈ ಸಂಭ್ರಮಕ್ಕೆ ಸಾಕ್ಷಿಯಾಗಿದ್ದ 'ಕಾನನ'ದ ಕೊಡುಗೆದಾರರನ್ನು ಗೌರವಿಸುವ ಕಾರ್ಯ ಆರಂಭವಾಯಿತು. ಕಾನನ ಬರಹಗಾರರ ತಂಡದಲ್ಲಿನ ವೈವಿಧ್ಯತೆ ವೇದಿಕೆಯ ಮೇಲೆ ಗೋಚರಿಸಲಾರಂಭಿಸಿತು. ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು, ಛಾಯಾಚಿತ್ರಗಾರರು, ಪರಿಸರಾಸಕ್ತರು, ಗೃಹಿಣಿಯರು, ಐಟಿ ಉದ್ಯೋಗಿಗಳು, ಹೀಗೆ ಹಲವು ಕ್ಷೇತ್ರದ ಬರಹಗಾರರು ಒಬ್ಬೊಬ್ಬರಾಗಿಯೇ ವೇದಿಕೆಗೆ ಬಂದು ನೆನಪಿನ ಕಾಣಿಕೆ ಸ್ವೀಕರಿಸಿ ಎಲ್ಲಾ ಅತಿಥಿಗಳೊಡನೆ ಫೋಟೋ ಕ್ಲಿಕ್ಕಿಸಿಕೊಂಡದ್ದು ಮಾತ್ರ ಅವಿಸ್ಮರಣೀಯ. 'ಕಾನನ' ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಸರದಿ ಬರಹಗಾರರದ್ದಾದಾಗ ಹೊಸ ಲೇಖಕರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುವ ಕಾನನ ತಂಡಕ್ಕೆ ಧನ್ಯವಾದ ತಿಳಿಸಿದರು.

ಕಾನನ ಪತ್ರಿಕೆಗೂ, ಬರಹಗಾರರಿಗೂ ನೇರ ಕೊಂಡಿಯಾದ ನಾಗೇಶ್ ರವರು ತಮ್ಮ ಸರಳ ಸಹಜ ಶೈಲಿಯಲ್ಲಿ ಕಾರ್ಯಕ್ರಮಕ್ಕೆ ನೆರೆದಿದ್ದವರೆಲ್ಲರನ್ನೂ ವಂದಿಸಿದರು. ದೀಪ್ತಿರವರ ಜೇನುದನಿಯ ಅಚ್ಚುಕಟ್ಟಾದ ನಿರೂಪಣೆಯಲ್ಲಿ ನಡೆದ ಕಾರ್ಯಕ್ರಮ ಹೊಸ ಬರಹಗಾರರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುವುದಂತು ಸತ್ಯ. 'ಕಾನನ' ಇ-ಮಾಸ ಪತ್ರಿಕೆಯ ತಂಡಕ್ಕೆ ಮತ್ತೊಮ್ಮೆ ಅಭಿನಂದನೆಗಳು.







**ಲೇಖನ: ಶ್ರೀಕಾಂತ್ ಎ. ವಿ.**
**ಶಿವಮೊಗ್ಗ ಜಿಲ್ಲೆ**



**ವಿವಿ ಅಂಕಣ**

# ಸಸ್ಯಗಳ ವಿದ್ಯುತ್ ಸಂವಹನ!

ತಲೆಯಲ್ಲಿಯೇ ಪ್ಲಾನ್ನಿಂಗ್ ನಡೆದಿತ್ತು. ಸಂಜೆ ಯಾವ ಶೋಗೆ ಹೋದರೆ ಸಿನೆಮಾ ಮುಗಿಯುವ ಸಮಯ, ಊಟದ ಸಮಯಕ್ಕೆ ಸರಿಯಾಗಿ ಮುಗಿಯುತ್ತದೆ ಎಂದು. ಜೊತೆಗೆ ಮಲ್ಟಿಪ್ಲೆಕ್ಸ್ ಆದ್ದರಿಂದ ಸಿನೆಮಾ ಟಿಕೆಟ್ ಸ್ವಲ್ಪ ದುಬಾರಿಯೇ ಇರುತ್ತದೆ. ಆದ್ದರಿಂದ ಕಡಿಮೆ ದರ ಇರುವ ದಿನ ಹಾಗೂ ಕಡಿಮೆ ದರ ಇರುವ ಶೋ ಅನ್ನು ಆರಿಸಿಕೊಳ್ಳುತ್ತೇನೆ. ಅಂತಹುದೇ ಒಂದು ದಿನ. ಬಹು ದಿನಗಳ ನಂತರ ಸಿನೆಮಾಗೆ ಹೋಗಬೇಕೆಂಬ ಮನಸ್ಸಾಗಿ ಈ ರೀತಿಯ ಪ್ಲಾನ್ನಿಂಗ್ ಮಾಡಿ ಇಟ್ಟಿದ್ದೆ. ಆದರೆ ಇಷ್ಟೆಲ್ಲಾ ಲೆಕ್ಕಾಚಾರ ಮಾಡಿ, ಕೂಡಿ-ಕಳೆದು, ಅಳೆದರೂ ಅಂದು ನಾನು ಸಿನೆಮಾ ನೋಡಲಾಗಲಿಲ್ಲ. ಅದಕ್ಕೆ ಮುಖ್ಯ ಕಾರಣ ಎರಡಿವೆ, ಅದರಲ್ಲಿ ಒಂದು ಸಿನೆಮಾ ಶುರುವಾಗುವ ಸಮಯ ಹತ್ತಿರ ಬರುತ್ತಿದ್ದಂತೆಯೇ ಟಿಕೆಟ್ ಗಳು ಹೆಚ್ಚಿನ ಸಂಖ್ಯೆಯಲ್ಲಿ ಆನ್ ಲೈನ್ ನಲ್ಲಿ ಸೇಲ್ ಆಗುತ್ತಿದ್ದವು. ಆಗ ನನಗೆ ಬೇಕಾದ ಮಧ್ಯದ ಕುರ್ಚಿ ಕಣ್ಮರೆಯಾಗುತ್ತಾ ಹೋಯಿತು. ಜೊತೆಗೆ ಆ ಮಲ್ಟಿಪ್ಲೆಕ್ಸ್ ನ ಪಾಪಿಗಳು, ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತಿದ್ದ ಬುಕಿಂಗ್ ಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಸಿನೆಮಾ ಟಿಕೆಟ್ ದರವನ್ನೂ ಏರಿಸುತ್ತಾ ಹೋದರು. ಗಂಟೆ ಗಂಟೆಗೆ ದರ ಏರುತ್ತಾ ಹೋಗಿ, ಮೊದಲಿಗೆ ನಾನು ನೋಡಿದ್ದ ಟಿಕೆಟ್ ದರಕ್ಕಿಂತ ಶೋ ಶುರುವಾಗುವ ಕೊನೆಯ ಅರ್ಧಗಂಟೆಯಲ್ಲಿ ಟಿಕೆಟ್ ದರ ಎರಡು ಪಟ್ಟು ಹೆಚ್ಚಿತ್ತು. ಅದರ ಜೊತೆಗೆ ನನಗೆ ಸಿನೆಮಾ ಸವಿಯಲು ಬೇಕಿದ್ದ ಮಧ್ಯದ ಕುರ್ಚಿಯೂ ಸೇಲ್ ಆಗಿದ್ದರಿಂದ ಅಂದು ನಾನು ತಲೆಯಲ್ಲಿ ಮಾಡಿದ ಪ್ಲಾನ್ನಿಂಗ್ ತಲೆಯಲ್ಲೇ ಉಳಿದಿತ್ತು. ಸಿನೆಮಾಗೆ ಹೋಗುವ ನನ್ನ ಯೋಚನೆಯನ್ನ ಮಾರುಕಟ್ಟೆಗೆ ತಕ್ಕಂತೆ ದರ ಏರಿಸಿದ ಬಿಸಿ ಕೊಲೆ ಮಾಡಿತ್ತು.




ಇದು ನನ್ನ ಸಿನೆಮಾ ಕಥೆ. ಎಂದಿನಂತೆ ಇದರಿಂದ ತಿಳಿಯುವುದೇನೋ ಒಂದು ವಿಷಯ ನಮ್ಮ ಈ ಬಾರಿಯ ಅಚ್ಚರಿ ಮೂಡಿಸುವ ಸಂಶೋಧನೆಯ ಪೀಠಿಕೆಯೇ. ಈ ಮೇಲೆ ಹೇಳಿರುವಂತೆ ಸಮಯ-ಸಂದರ್ಭಕ್ಕೆ ತಕ್ಕಂತೆ ಬದಲಾದ ಟಿಕೆಟ್ ದರ ಗಮನಿಸಿದ್ದೀರಿ. ಆದರೆ ನಾವು ದಿನ ನಿತ್ಯ ನೋಡುವ ಸಸ್ಯಗಳ ಹಾಗೂ ಹೂಗಳ ಕಾರ್ಯವಿಧಾನವೂ ಹೇಗೆ ಇದೆ ಗೊತ್ತೇನು? ವಿವರಿಸಿ ಹೇಳುತ್ತೇನೆ ಕೇಳಿ, ನಮಗೆಲ್ಲ ತಿಳಿದಿರುವ ಹಾಗೆ ಸಸ್ಯ, ಗಿಡ-ಮರಗಳು ಚಂದದ ಹಾಗೂ ಸುವಾಸಿತ ಹೂ ಬಿಡುವುದೇ ಪರಾಗ ಸ್ಪರ್ಶಕಗಳನ್ನು ಆಕರ್ಷಿಸಲು. ಅವುಗಳ ಆಗಮನದ ನಂತರ ತಮ್ಮ ಪರಾಗಸ್ಪರ್ಶ ಕ್ರಿಯೆ ಮುಗಿಸಿಕೊಂಡು ಅದಕ್ಕೆ ತಕ್ಕ ಉಡುಗೊರೆಯಂತೆ ಮಕರಂದವನ್ನು ಕೊಡುವುದು ವಾಡಿಕೆ. ಇದು ನಮ್ಮ ನಿಮ್ಮ ಹಾಗೆ ಜೆನ್-ಜೀ ಅಥವಾ ಮಿಲ್ಲೆನಿಯಲ್ಸ್ ಗೆ ತಿಳಿದಿರುವ ವಿಷಯ. ಈಗಿನ ಆಲ್ಫ ಮತ್ತು ಬೀಟಾ ಜೆನರೇಷನ್ ಕಲಿಯುವ ವಿಚಾರವೇನೆಂದರೆ, ಸರಳವಾಗಿ ಕಾಣುವ ಈ ಸಸ್ಯ ಮತ್ತು ಹೂಗಳ ಪರಾಗಸ್ಪರ್ಶಕಗಳು ತಮ್ಮ ಬಳಿ ಓಡಾಡುವಾಗ ಹೊರಬಿಡುವ ಸೂಕ್ಷ್ಮ ವಿದ್ಯುತ್ ತರಂಗಗಳನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ಅವುಗಳನ್ನು ಆಕರ್ಷಿಸಲು ಹೆಚ್ಚಿನ ಸುವಾಸನೆ ಹಾಗೂ ಮಕರಂದವನ್ನು ತದನಂತರ ಉತ್ಪಾದಿಸುತ್ತವೆಯಂತೆ! ಅಷ್ಟೇ ಅಲ್ಲ ಸಿಗ್ನಲ್ ಪಡೆದ ಈ ಸಸ್ಯಗಳು ಮಣ್ಣಿನ ಮೂಲಕ ಪಕ್ಕದ ಹಾಗೂ ದೂರದ ಸಸ್ಯಗಳಿಗೂ ಈ ಸಂದೇಶವನ್ನು ರವಾನಿಸುತ್ತವೆಯಂತೆ!

ಇದನ್ನೆಲ್ಲ ಹೇಳುತ್ತಿರುವ ಸಂಶೋಧಕ ಡೇನಿಯಲ್ ರಾಬರ್ಟ್ ಇಂಗ್ಲೆಂಡ್ ನ ಬ್ರಿಸ್ಟೋಲ್ ವಿಶ್ವವಿದ್ಯಾಲಯದ ಸಂಶೋಧಕ. ಸಸ್ಯಗಳು ವೇಗವಾಗಿ ಸಂವಹಿಸಲು ರಾಸಾಯನಿಕ ಮಾರ್ಗವನ್ನು ಅನುಸರಿಸುವ ಬದಲು ಆಗಾಗ ವಿದ್ಯುತ್ ತರಂಗಗಳಿಂದ ಸಂವಹಿಸುತ್ತವೆ. ಎಂದು ಇಲ್ಲಿಯವರೆಗೆ ವಿಜ್ಞಾನಿಗಳ ಊಹೆಯಾಗಿತ್ತು. ಆದರೆ ಅದು ಹೇಗೆ ನಡೆಯುತ್ತದೆ ಎಂಬುದು ಪ್ರಕೃತಿಯ ಗುಟ್ಟಾಗಿಯೇ ಇತ್ತು. ಆದರೆ ರಾಬರ್ಟ್ ಈ ಹಿಂದೆ ಬಂಬಲ್ ಬೀ (ದೊಡ್ಡ ಜೇನು ನೊಣ) ಮೇಲೆ ನಡೆದಿದ್ದ ಸಂಶೋಧನೆ ಒಂದರಲ್ಲಿ ಭಾಗಿಯಾಗಿದ್ದರು. ಅದರ ಪ್ರಕಾರ, ಪೆಟುನಿಯಾ ಎಂಬ ಗಿಡದ ಕಾಂಡದಲ್ಲಿ ಈ ಬಂಬಲ್ ಬೀಗಳು ಬರುವಾಗ ಹೊತ್ತು ತರುತ್ತಿದ್ದ ಧನಾತ್ಮಕ ಚಾರ್ಜ್ ಗೆ ಅನುಗುಣವಾಗಿ ಋಣಾತ್ಮಕ ಚಾರ್ಜ್ ಗಳನ್ನು ಹೊಂದುತ್ತಿದ್ದವಂತೆ ಜೊತೆಗೆ ಅವುಗಳು ಹತ್ತಿರವಾಗುತ್ತಿದ್ದಂತೆ ತಮ್ಮ ಹೂಗಳಲ್ಲಿನ ಸುಗಂಧವನ್ನು ಹೆಚ್ಚಿಸುತ್ತಿದ್ದವಂತೆ.



ಈ ಸಂಶೋಧನೆಯ ಅನುಭವದ ಮೇಲೆ ಇವರೇ ಒಂದು ತಂಡವನ್ನು ರೂಪಿಸಿ ಇನ್ನೂ ನಿಖರವಾದ ಸಂಶೋಧನೆಯನ್ನು ಮಾಡಲು ಹೊರಟರು. ಅದರ ಅನುಸಾರ ದುಂಬಿಗಳು ರೆಕ್ಕೆ ಬಡಿಯುವಾಗ ಹೊರಸೂಸುವ ವಿದ್ಯುತ್ ಚಾರ್ಜ್ ಹೋಲುವ ಚಾರ್ಜ್ ಗಳನ್ನು ನೀಡುವ ಆಂಟೆನಾಗಳನ್ನು ತಯಾರಿಸಿದರು. ನಂತರ ಪ್ರಯೋಗಾಲಯದಲ್ಲೇ ಬೆಳೆದ ಡಾಫೊಡಿಲ್

ಹೂವಿನ ಸಸ್ಯದ ಕಾಂಡಕ್ಕೆ ಆ ವಿದ್ಯುತ್ ಚಾರ್ಜ್ ಗಳನ್ನು ಗ್ರಹಿಸಬಲ್ಲ ತಟ್ಟೆಯನ್ನು ಸುತ್ತಿದರು. ಅವರ ಊಹೆಯಂತೆಯೇ ದೂರದಿಂದ ಬರುತ್ತಿದ್ದ ವಿದ್ಯುತ್ ಚಾರ್ಜ್ ಗಳನ್ನು ಗಿಡ ಗ್ರಹಿಸುತ್ತಿತ್ತು. ಹಾಗಾದರೆ ಈ ಹೂಗಳ ದಳಗಳನ್ನು ಬದಲಿಸಿದರೆ ಅಥವಾ ಮುರಿದರೆ ಏನಾಗುವುದು ಎಂದೂ ಪರೀಕ್ಷಿಸಿದರು. ಹಾಗೆ ದಳಗಳನ್ನು ತೆಗೆದಾಗ ಕಾಂಡದಲ್ಲಿ ಯಾವುದೇ ಸಿಗ್ನಲ್ ಗ್ರಹಿಕೆಯಾಗಲಿಲ್ಲ. ಹಾಗಾದರೆ ಈ ಚಾರ್ಜ್ ಗಳ ಗ್ರಹಿಕೆ ಹೂಗಳಿಂದಲೇ ಆಗುತ್ತಿದೆ ಎಂದು ಖಾತ್ರಿಯಾಯ್ತು ಅಲ್ಲವೇ.

ಗುಡ್. ಮುಂದೆ ಹೋಗುವುದಾದರೆ, ಈ ಬಾರಿ ಇದೇ ಪ್ರಯೋಗವನ್ನು ಹಳದಿ ಬಣ್ಣದ ಹೂಗಳನ್ನು ಬಿಡುವ ಬಟರ್ ಕಪ್ ಸಸ್ಯದ ಮೇಲೆ ಮಾಡಿದರು. ಆದರೆ ಈ ಬಾರಿ ಗ್ರಹಿಕೆ ತಟ್ಟೆಗಳನ್ನು ಅಲ್ಲಿದ್ದ ಬೇರೆಯೇ ಮರಗಳ ಕಾಂಡಗಳಿಗೂ ಅಳವಡಿಸಿದರು. ಹಾಗೂ ಇಲ್ಲಿ ನಾವು ಹೂಗಳ ಬಳಿ ಆಂಟೆನಾದಿಂದ ನೀಡುವ ವಿದ್ಯುತ್ ಚಾರ್ಜ್ ಗಳು ಬೇರೆ ಮರಗಳಿಗೆ ತಲುಪದಂತೆ ತಡೆಗಳನ್ನು ಹಾಕಲಾಗಿತ್ತು. ಅವರ ಅಚ್ಚರಿಗೆ, ಹೀಗೆಲ್ಲ ಮಾಡಿದ್ದರೂ ದೂರದ ಬಟರ್ ಕಪ್ ಮರಗಳಲ್ಲಿಯೂ ಇಲ್ಲಿ ನೀಡಿದ್ದ ವಿದ್ಯುತ್ ಚಾರ್ಜ್ ಗಳಿಗೆ ಪ್ರತಿಕ್ರಿಯಿತ ಚಾರ್ಜ್ ಗಳು ಮೂಡಿದ್ದವು. ಇದರಿಂದ ನೇರವಾಗಿ ತಿಳಿಯುತ್ತದೆ, ಮರಗಳು/ಸಸ್ಯಗಳು ಇಂತಹ ವಿದ್ಯುತ್ ಚಾರ್ಜ್ ಗಳ ವಿಚಾರ ವಿನಿಮಯವನ್ನು ಸಲೀಸಾಗಿ ಮಾಡುತ್ತಿವೆ ಹಾಗು ಮಾಡುತ್ತವೆ ಎಂದು! ಆದರೆ ಅದೇ ಸಂಶೋಧನೆಯಲ್ಲಿ ತಿಳಿದ ವಿಚಾರವೆಂದರೆ, ಸುಮಾರು 10 volt ವಿದ್ಯುತ್ ನೀಡುತ್ತಿದ್ದ ಆಂಟೆನಾಗಳಿಂದ ಗಿಡಗಳು ಗ್ರಹಿಸುತ್ತಿದ್ದದ್ದು 20 millivolts. ಇದು ಅತೀ ಕಡಿಮೆ ಚಾರ್ಜ್ ಆದರೂ ರವಾನೆಯಾಗುತ್ತಿರುವುದಂತೂ ನಿಜ. ಇಲ್ಲಿ ನಾವು ಗಮನಿಸಬೇಕಾದದ್ದು ವಿಚಾರ ವಿನಿಮಯವಾಗಿ ಸಸ್ಯಗಳು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸುತ್ತಿವೆ ಎಂಬುದೇ ಮುಖ್ಯ! ಎನ್ನುತ್ತಾರೆ ಸಂಶೋಧಕ ರಾಬರ್ಟ್. ಹೌದು, ನನ್ನದೂ ಅದೇ ವಾದ.




ತಂಗಾಳಿ ಬೀಸುವಿಕೆಯನ್ನು ವಿವರಿಸುವ, ಮುಗಿಲಿಗೇ ಹಸಿರು ತೋರಣ ಹೆಣೆದಂತೆ ತೋರುವ, ಎಷ್ಟೋ ಕವಿಗಳ, ಲೇಖಕರ ಸ್ಫೂರ್ತಿಯಾಗಿ ನಿಶ್ಚಲವಾಗಿ ನಿಂತಿರುವ ಮುಗ್ದ ಮಗುವಿನಂತೆ ಕಾಣುವ ಈ ಸಸ್ಯಕೋಟಿಗಳು, ನಮ್ಮ ಮಾನವ ಪ್ರಭೇದ ಬರುವ ಕೋಟ್ಯಾನು ಕೋಟಿ ವರ್ಷಗಳ ಹಿಂದೆಯೇ ತಮ್ಮ ಆಧಿಪತ್ಯವನ್ನು ಈ ಭೂಮಿಯ ಮೇಲೆ ಸ್ಥಾಪಿಸಿ ಎಷ್ಟೋ ಅಡೆತಡೆಗಳನ್ನು ದಾಟಿ ಇಲ್ಲಿಯವರೆಗೆ ಹಾಗೇ ನಿಂತಿರುವ ಈ ದೇವತೆಗಳ ಬುದ್ದಿವಂತಿಕೆಯನ್ನು, "ನಮ್ಮ ಹಾಗೆ ಪ್ರತಿಕ್ರಿಯಿಸದ ನಿಶ್ಚಲಿಗಳು". ಎಂದು ಆತುರದ ಅರೆಬರೆ ಅರಿವಿನಲ್ಲಿ ಮುದ್ರೆ ಹಾಕಿಬಿಡುವ ನಾವು ಎಂಥ ಬುದ್ದಿಜೀವಿಗಳು?

**Source:** [www.snexplores.org](www.snexplores.org)



**ಲೇಖನ: ಜೈಕುಮಾರ್ ಆರ್.**
**ಡಬ್ಲ್ಯು. ಸಿ. ಜಿ. ಬೆಂಗಳೂರು ನಗರ ಜಿಲ್ಲೆ**

# ಗಗನ

ಅದೆಷ್ಟು ಎತ್ತರ ನೀ ವಿಸ್ತಾರ ಗಗನ
ಅಚ್ಚರಿಗಳೊಡನೆ ಸೆಳೆಯುವೆ ಎಲ್ಲರ ಗಮನ
ಸೂರ್ಯ, ಚಂದ್ರ ತಾರೆಗಳ ತಾಣ
ನೋಡಲು ಬೆಳೆಸಲೆ ನಿನ್ನತ್ತ ಪಯಣ?

ಒಮ್ಮೆ ಕಪ್ಪು, ಒಮ್ಮೆ ಕೆಂಪು, ಒಮ್ಮೊಮ್ಮೆ ಬಿಳಿ
ಸೂರ್ಯ ರಶ್ಮಿಗಳೊಡನೆ ಬೆಳಕಿನ ಓಕುಳಿ
ಗುಡುಗುಡು ಶಬ್ದದಿ ಮುನ್ನುಗ್ಗುವ ಗುಡುಗು
ವೇಗದಿ ನುಗ್ಗಿ ಮರೆಯಾಗುವ ಮಿಂಚಿನ ಮಿನುಗು!

ಮೋಡದಿಂದ ಜಾರಿ ಜಿನುಗುವ ಮಳೆ ಹನಿ
ಭೂಸ್ಪರ್ಶಕೆ ಕಾಯ್ವ ತಂಪಾದ ಇಬ್ಬನಿ
ಬಿಸಿಲ ಮಳೆಯಲ್ಲಿ ಮೂಡಿದ ಕಾಮನ ಬಿಲ್ಲು
ಬಾಗಿದ ಬಣ್ಣಗಳ ಬೆರಗು ಕಂಡೆ ನಾ ಅಲ್ಲು!


ಕುತೂಹಲವ ಕೆರಳಿಸಿದೆ ನೀಲಿ ಆಕಾಶ
ಆಲೋಚಿಸಿದಷ್ಟೂ ಅನಂತ... ವಿಶೇಷ
ಹಕ್ಕಿಗಳಂತೆ ರೆಕ್ಕೆ ಪಡೆದು ಹಾರಲೆ ನಿನ್ನೆಡೆಗೆ
ರೋಮಾಂಚನಗೊಳಿಸುವ ಎತ್ತರದ ನೋಟದೆಡೆಗೆ!

ಗುರಿ ತಲುಪಲು ನೀನಾಗಬಹುದೇ ಮಿತಿ?
ಅಳೆಯಲಾಗದಷ್ಟು ಅಗಾಧ ನಿನ್ನ ಪರಿಮಿತಿ.

- ದೀಪಿಕಾ ಬಾಯಿ
ಬೆಂಗಳೂರು ಜಿಲ್ಲೆ

© ಧನರಾಜ್ ಎಂ.

# ಪ್ರಕೃತಿ ಬಿಂಬ



**ಕಾಕ** **© ಹರಿಹರನ್ ಐ. ಎಸ್.**

ದಕ್ಷಿಣ ಏಷ್ಯಾ ಮತ್ತು ಆಸ್ಟ್ರೇಲಿಯಾದ ಸಮತಟ್ಟು ಪ್ರದೇಶಗಳ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಾಣಸಿಗುವ ಈ ಚಿಟ್ಟೆಗಳು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತವೆ. ಇದನ್ನು ವೈಜ್ಞಾನಿಕವಾಗಿ ಯುಪ್ಲೋಯಾ ಕೋರ್ (*Euploea core*) ಎಂದು ಕರೆಯಲಾಗುತ್ತದೆ. ಕಪ್ಪು ರೆಕ್ಕಗಳ ಅಂಚಿನಲ್ಲಿ ಬಿಳಿಯ ಮಚ್ಚೆಗಳ ಉದ್ದವಾದ ಸಾಲಿರುತ್ತದೆ. ಈ ಚಿಟ್ಟೆಗಳ ದೇಹದಿಂದ ಬರುವ ವಾಸನೆಯು, ಪರಭಕ್ಷಕಕಗಳು ಇವುಗಳನ್ನು ತಿನ್ನಲಾಗದಂತೆ ಮಾಡುತ್ತದೆ. ಕಣಗಲೆ (Nerium oleander), ವಿವಿಧ ಪ್ರಭೇದದ ಅಂಜೂರದ ಗಿಡಗಳು ಇವುಗಳ ಆತಿಥೇಯ ಸಸ್ಯಗಳಾಗಿವೆ.



**ನಾವಿಕ** **© ಹರಿಹರನ್ ಐ. ಎಸ್.**

ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಸಮತಟ್ಟು ಪ್ರದೇಶ, ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ನಾವಿಕ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ನೆಪ್ಟಿಸ್ ಹೈಲಾಸ್ (*Neptis hylas*) ಎಂದು ಕರೆಯಲಾಗುತ್ತದೆ. ಕಡುಗಂದು ಬಣ್ಣವಿರುವ ರೆಕ್ಕೆಯ ಮುಂಭಾಗದ ಅಂಚಿನಿಂದ ಹಿಂಭಾಗದವರೆಗೆ ಬಿಳಿ ಚುಕ್ಕೆಗಳ ಮೂರು ಸಮನಾಂತರ ಪಟ್ಟಿಗಳನ್ನು ಕಾಣಬಹುದು. ಬೆನ್ನಿನ ಭಾಗವು ಹಸಿರು ಹೊಳಪನ್ನು ಹೊಂದಿದೆ. ಒಂದು ಸಲ ರೆಕ್ಕೆ ಬಡಿದು, ಸುಮಾರು ಹೊತ್ತು ತೇಲುತ್ತಿರುತ್ತದೆ, ಗಿಡಗಳ ಮೇಲೆ ಕುಳಿತಾಗ ರೆಕ್ಕೆಗಳನ್ನು ಮುಚ್ಚುವುದು, ತೆರೆಯುವುದು ಮಾಡುತ್ತಿರುತ್ತದೆ. ಯುಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರುವ ರಬ್ಬರ್ ಮರಗಳು, ಫ್ಯಾಬೇಸಿ (Fabaceae) ಕುಟುಂಬದ ಕೆಲವು ದ್ವಿದಳ ಸಸ್ಯಗಳು ಮತ್ತು ಮಾಲ್ವೇಸೀ (Malvaceae) ಕುಟುಂಬದ ಹೂಬಿಡುವ ಕೆಲವು ಸಸ್ಯಗಳು ಇವುಗಳ ಆತಿಥೇಯ ಸಸ್ಯಗಳಾಗಿವೆ.



ಲುಂಬಿನಿಯ ಚಿಟ್ಟೆ ©
ಹರಿಹರನ್ ಐ. ಎಸ್.

ದಕ್ಷಿಣ ಏಷ್ಯಾ ಖಂಡದ ವಿವಿಧ ಪ್ರದೇಶಗಳ ತೋಟಗಳು, ಪಾಳು ಭೂಮಿ ಮತ್ತು ತೆರೆದ ಅರಣ್ಯ ಪ್ರದೇಶಗಳಲ್ಲಿ ಕಂಡುಬರುವ ಈ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಜುನೋನಿಯಾ ಲೆಮೊನಿಯಾಸ್ (*Junonia lemonias*) ಎಂದು ಕರೆಯಲಾಗುತ್ತದೆ. ದೇಹವು ಕಂದು ಬಣ್ಣದ್ದಾಗಿದ್ದು, ರೆಕ್ಕೆಗಳ ಮೇಲೆ ಹಲವಾರು ಕಣ್ಣಿನಂತಹ ಮಚ್ಚೆಗಳು, ಕಪ್ಪು ಹಾಗೂ ನಿಂಬೆ ಹಳದಿ ಬಣ್ಣದ ಚುಕ್ಕೆ ಮತ್ತು ರೇಖೆಗಳನ್ನು ಕಾಣಬಹುದು. ಇವು ತುಂಬಾ ಕ್ರಿಯಾಶೀಲವಾಗಿದ್ದು, ಸೂರ್ಯನ ಕಿರಣಗಳಿಗೆ ರೆಕ್ಕೆಗಳನ್ನು ತೆರೆದು ಕೂರುತ್ತವೆ. ಗಂಡು ಚಿಟ್ಟೆಗಳು ತಮ್ಮದೇ ಆದ ವಾಸಕ್ಷೇತ್ರವನ್ನು ಹೊಂದಿರುತ್ತವೆ ಮತ್ತು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಗಳನ್ನು ಹೀರಿಕೊಳ್ಳುತ್ತವೆ. ಮುಳ್ಳು ಗೊರಂಟಿ (*Barleria prionitis*), ಕೊಳವಳಿಕೆ (*Hygrophila schulli*), ಬಿಳಿ ಸೆಣಬು (*Corchorus capsularis*) ಇವುಗಳ ಆತಿಥೇಯ ಸಸ್ಯಗಳಾಗಿವೆ.



**ಕಂದು ಹೂ** **© ಹರಿಹರನ್ ಐ. ಎಸ್.**

ಏಷ್ಯಾ ಖಂಡದ ವಿವಿಧ ಪ್ರದೇಶಗಳ ಸಮತಟ್ಟು ಜಾಗಗಳು, ಎಲೆ ಉದುರುವ ಕಾಡುಗಳು, ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಈ ಚಿಟ್ಟೆಯು ನಿಂಫಾಲಿಡೆ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಜುನೋನಿಯಾ ಇಫಿಟಾ (*Junonia iphita*) ಎಂದು ಕರೆಯಲಾಗುತ್ತದೆ. ಕಿತ್ತಳೆ ಕಂದು ಬಣ್ಣದ ಮೇಲ್ಭಾಗವನ್ನು ಹೊಂದಿದ್ದು, ಹಲವಾರು ಕಂದು ಪಟ್ಟೆಗಳನ್ನೂ ಸಹ ಹೊಂದಿದೆ. ಕೆಳಗಿನ ರೆಕ್ಕೆಗಳ ಮೇಲೆ ಹಲವಾರು ಕೆಂಪು ಮಿಶ್ರಿತ ಕಂದು ಬಣ್ಣದ ಕಣ್ಣಿನಂತಹ ಮಚ್ಚೆಗಳ ಸರಣಿಯನ್ನು ಹೊಂದಿದೆ. ಸಾಮಾನ್ಯವಾಗಿ ರೆಕ್ಕೆಗಳನ್ನು ತೆರೆದು ಗಿಡ ಅಥವಾ ನೆಲದ ಮೇಲೆ ಕೂತು ಬೇಟೆಯಾಡುತ್ತದೆ. ಅಕಾಂಥೇಸಿ (Acanthaceae) ಕುಟುಂಬಕ್ಕೆ ಸೇರುವ ರುಯೆಲಿಯಾ ರಿಪನ್ಸ್ (*Ruellia repens*) ಮತ್ತು ಹೆಮಿಗ್ರಾಫಿಸ್ ರೆಪ್ಟ್ಯಾನ್ಸ್ (*Hemigraphis reptans*) ಇವುಗಳ ಆತಿಥೇಯ ಸಸ್ಯಗಳಾಗಿವೆ.

**ಚಿತ್ರ: ಹರಿಹರನ್ ಐ. ಎಸ್.**

**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು





ನೀಲಿಗ್ರಹ ಎಂದೇ ಗುರುತಿಸಿಕೊಂಡಿರುವ ನಮ್ಮ ಭೂಮಿ, ಸೌರಮಂಡಲದಲ್ಲಿ ಜೀವಿಗಳನ್ನು ಹೊಂದಿರುವ ಏಕೈಕ ಗ್ರಹ.

"ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆಯೋಳ, ಭೂಮ್ತಾಯ ಎದ್ದೊಂದು ಘಳಿಗೆ ನೆನೆದೇನು..."

ಎಂಬ ಜಾನಪದ ಗೀತೆಯ ಸ್ವಾರಸ್ಯ ನಮ್ಮೆಲ್ಲರಿಗೂ ಚಿರಪರಿಚಿತ. ಸುಮಾರು 4.5 ಬಿಲಿಯನ್ ವರ್ಷಗಳ ಇತಿಹಾಸವಿರುವ ನಮ್ಮ ಭೂಮಿಯ ಮೇಲೆ ಜೀವವಿಕಾಸದ ವಿಸ್ಮಯದ ಬಗ್ಗೆ ವಿಜ್ಞಾನಿಗಳಿಗೆ ಕುತೂಹಲ ಹೆಚ್ಚುತ್ತಲೇ ಇದೆ. ಸಂಶೋಧನೆಗಳು ತಿಳಿಸುವಂತೆ ಜೀವಿಗಳು ಜೀವಿಸಲು ಯೋಗ್ಯವಾದ, ಅತ್ಯವಶ್ಯಕವಾದ ಗಾಳಿ, ನೀರು, ಬೆಳಕು ಮತ್ತು ಮಣ್ಣು ಎಲ್ಲವೂ ಸಿಗುವುದು ನಮ್ಮ ಭೂಮಿಯಲ್ಲಿ ಮಾತ್ರ. ಕೋಟ್ಯಾಂತರ ಜೀವರಾಶಿಗಳಿಗೆ ನೆಲೆಯಾಗಿರುವ ಈ ಭೂಮಿಯಲ್ಲಿ, ಜೀವ ವಿಕಾಸದ ಹಾದಿಯಲ್ಲಿ ನಿಧಾನಗತಿಯಲ್ಲಿ ಪ್ರಗತಿ ಹೊಂದಿದ ಮಾನವ ತೀವ್ರಗತಿಯಲ್ಲಿ, ಈಗ ಮಾಡುತ್ತಿರುವ ಹಾನಿಯಿಂದ ಮುಂದೇನಾಗಬಹುದೆಂಬ ಆತಂಕ ಮೂಡುತ್ತಿದೆ. ಭೂಮಿತಾಯಿಯ ಉದರ ಸೀಳಿದರು ಮುತ್ತುರತ್ನಗಳ ಕೊಳ್ಳೆಹೊಡೆದರು, ಮಾಲಿನ್ಯ ಮಾಡುತ್ತಿದ್ದರೂ ಸಹಿಸಿಕೊಂಡಿದೆ, ಭೂಮಿ. ಆದ್ದರಿಂದ ಸಾಧ್ಯವಾದಷ್ಟು ಪ್ರಕೃತಿ ಸ್ನೇಹಿ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಇರುವುದೊಂದೇ ಭೂಮಿ, ಇದನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು ಎಂದು ಜಾಗೃತಿ ಮೂಡಿಸಲು ಏಪ್ರಿಲ್ 22 ರಂದು **ವಿಶ್ವಭೂಮಿ ದಿನ**ವನ್ನು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ** :
ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.




**ಲೇಖಕರು: ಡಾ. ಅಶ್ವಥ ಕೆ. ಎನ್.**
**ಪ್ರಕಾಶನ: ವೃಕ್ಷ ಪ್ರಕಾಶನ**
**ಬೆಲೆ: ರೂ. 180 /-**
**ರವಾನೆ ವೆಚ್ಚ : 50/-**
**ಒಟ್ಟು: 230/-**
**ಮೊದಲ ಮುದ್ರಣ: 2025**
**ಪುಟಗಳು: 96+ 12**

ಪಕ್ಷಿಗಳು ನಮ್ಮ ಭೂಮಂಡಡದಲ್ಲಿನ ಅದ್ಭುತ ಜೀವಿಗಳಲ್ಲಿ ಒಂದಾಗಿವೆ. ಇವುಗಳ ಬಣ್ಣ ಬಣ್ಣದ ಪುಕ್ಕಗಳು, ವಿಶಿಷ್ಟವಾದ ಕೂಗು, ಗೂಡು ಕಟ್ಟುವ ರೀತಿ ಎಂಥವರನ್ನೂ ಮಂತ್ರ ಮುಗ್ಧರನ್ನಾಗಿಸುತ್ತವೆ. ಈ ವಿಶಿಷ್ಟ ಜೀವಿಗಳನ್ನು ಹಳ್ಳಿ ವಾಸಿಗಳು ತುಂಬಾ ಹತ್ತಿರದಿಂದ ಗಮನಿಸುತ್ತಾರೆ, ಅದರಲ್ಲೂ ಹಳ್ಳಿಯ ಮಕ್ಕಳು ಪಕ್ಷಿಗಳನ್ನು ತಮ್ಮ ಬದುಕಿನ ಭಾಗವಾಗಿಯೇ ಪರಿಗಣಿಸಿರುತ್ತಾರೆ. ಇಂತಹ ವಿಶಿಷ್ಟ ಜೀವಿಗಳ ಕೌತುಕ ಬದುಕನ್ನು ತಮ್ಮ ಅನುಭವಗಳ ಜೊತೆ ಸೇರಿಸಿ ಕತೆಗಳ ಮೂಲಕ ಲೇಖಕರಾದ ಡಾ. ಅಶ್ವಥ ಕೆ. ಎನ್. ರವರು ಸೊಗಸಾಗಿ ಹೆಣೆದಿದ್ದಾರೆ. ಈ ಪುಸ್ತಕವು ಪರಿಸರ ಆಸಕ್ತರಿಗೆ, ಕನ್ನಡ ಸಾಹಿತ್ಯ ಪ್ರಿಯರಿಗೆ, ಯುವಕರಿಗೆ, ಮಕ್ಕಳಿಗೆ ಹಾಗೂ ಎಲ್ಲಾ ವರ್ಗದ, ಎಲ್ಲಾ ವಯಸ್ಸಿನ ಓದುಗರಿಗೂ ಒಂದು ಹೊಸ ಅನುಭವವನ್ನು ನೀಡುವುದರಲ್ಲಿ ಸಂದೇಹವಿಲ್ಲ.

ಓದಲು ಇಚ್ಛಿಸುವವರು ಕೆಳಗಿನ ಲಿಂಕ್ ಅನ್ನು ಉಪಯೋಗಿಸಿ ಖರಿಸಿದಬಹುದು. ಹಾಗೆಯೇ WCG ಕಡೆಯಿಂದ 2020 ರಲ್ಲಿ ಪ್ರಕಟವಾದ ಜೀವಾಂಕುರ ಪುಸ್ತಕವನ್ನು ಸಹ ಖರೀದಿಸಬಹುದು. (ಲಿಂಕ್ ಅನ್ನು Whatsapp ಮೂಲಕ ಪಡೆಯಲು ದೂರವಾಣಿ ಸಂಖ್ಯೆ: 9902552812 ಗೆ SMS ಕಳುಹಿಸಿ)

https://forms.gle/ZE7R1UiieoygzHc78